SPECIAL MOTION.

Re. Delimitation of Constituencies

Mr. SPEAKER (Sri V. Venkatappa).—Now discussion on the Special Motion *re.* Delimitation of Constituencies will continue.

(Sri D. H. Chandrasekharaiya rose from his seat to speak.)

Mr. SPEAKER.—Doos the Hon'ble Member want to move the amendment?

Sri D. H. CHANDRASEKHARAIYA.—Yes, Sir.

ಅಧ್ಯಕ್ಷರು.—ನಿನ್ನೆ ಕೇಳಿದಾಗ ಅದನ್ನು ಮಂಡಿಸುವುದಿಲ್ಲವೆಂದು ಹೇಳಿದರು. ಅಮೇಲೆ ಬೇರೆ ವಿಷಯವನ್ನು ತೆಗೆದುಕೊಳ್ಳಲಾಯ್ತು. ಆದ್ದರಿಂದ ಈಗ ಅದನ್ನು ಸೂಚಿಸುವುದು ಸರಿಯೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅನೇಕರು ಅದನ್ನು ತೆಗೆದುಕೊಂಡು ಚರ್ಚೆ ಮಾಡುವುದು ಸೂಕ್ತವೆಂದು ತಿಳಿಸಿರುತ್ತಾರೆ. ಸಭೆಯವರು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಇಷ್ಟಪಟ್ಟರೆ ನನ್ನ ಅಭ್ಯಂತರವಿಲ್ಲ.

ಮುಷಿರ್ ಉಲ್-ಮುಲ್ಕ್ ಜೆ. ಮಹಮದ್ ಇಮಾಂ ರವರು (ಚಿತ್ರದುರ್ಗ ಮತ್ತು ತುಮಕೂರು—ಮುಸ್ಲಿಂ).—ಒಂದು ಸಲ ಮಂಡಿಸದೇ ಇದ್ದ ಮೇಲೆ ಅದು ಲ್ಯಾಪ್ಸ್ ಆಗುತ್ತದೆ, ಆಜೆಂಡಾದಲ್ಲಿರುವುದಿಲ್ಲ. ಅದನ್ನು ಸಮಿತಿಗೆ ಕಳುಹಿಸಿದರೆ ಅಲ್ಲಿ ತೀರ್ಮಾನವಾಗುತ್ತದೆ. ಅಲ್ಲದೆ ಈಗ ಮಂಡಿಸಿದರೆ ಅಥವಾ ಬೇರೆರೀತಿ ಮಾಡಿದರೆ ಅದು ಸರಿಹೋಗುವುದಿಲ್ಲ. ನಾಳೆ ಕೂಡ ಹಾಗೆ ಮಾಡುವುದಕ್ಕೆ ಇದೊಂದು ಉದಾಹರಣೆಯಾಗುತ್ತದೆ. ಆದ್ದರಿಂದ ಸಮಿತಿಗೆ ಕಳುಹಿಸಿ ಅಲ್ಲಿಂದ ವರದಿ ಬಂದಮೇಲೆ ಪುನಃ ತೆಗೆದುಕೊಳ್ಳಬಹುದು. It may also be referred to a Committee that is going to be constituted. It does not look proper to take up now a subject that was not moved and lapsed consequently.

Mr. SPEAKER.—If the House wants to discuss the amendment, I have no objection.

ಕೆಲವು ಚರ್ಚೆಮಾಡುವುದು ಅಗತ್ಯವೆಂದು ತಿಳಿಸಿದ್ದರ ಮೇಲೆ ನಾನು ಹೇಳಿದೆ. I have said that it is not proper. ಈಗ ಸಭೆಯು ತನ್ನ ಅಭಿಪ್ರಾಯವನ್ನು ಸೂಚಿಸಬಹುದು.

I have said what happened yesterday. But if the House desires to take it up. I have no objection.

ಶ್ರೀ ಕೆ. ಟಿ. ಭಾಷ್ಯಂರವರು.—(ರಾ ಮತ್ತು ಲೇಬರ್ ಸಚಿವರು).—I wish to suggest one thing. ಖಚಿತವಾದ ಅಭಿಪ್ರಾಯವನ್ನು ತಿಳಿದುಕೊಳ್ಳುವುದು ಒಳ್ಳೆಯದೆಂದು ಅನೇಕ ಸದಸ್ಯರು ಮೊದಲೇ ಸೂಚನೆ ಕೊಟ್ಟರು. ಈಗ ಚರ್ಚೆ ಕೂಡ ಮಾಡಿದ್ದೇವೆ. ಖಚಿತವಾದ ಅಭಿಪ್ರಾಯ ಇಂಥಾದ್ದು ಎಂದು ಹೇಳಿದರೆ ಅದಕ್ಕನುಗುಣವಾಗಿ ಡಿಲಿಮಿಟೇಷ್ಣ ಮಾಡುವುದಕ್ಕೆ ಅನುಕೂಲ. ಇಲ್ಲದಿದ್ದರೆ ಸಮಿತಿಯಲ್ಲಿ ಆ ಚರ್ಚೆ ಪುನಃ ಬರಬಹುದು ಆದಕಾರಣ ಈಗ ಸಿಂಗರ್ ಮೆಂಬರ್ ಕಾರ್ಪಸ್ಟಿಟ್ಯೂಯೆನ್ಸಿ ಇರಬೇಕೇ ಅಥವಾ ಪ್ಲೂರಲ್ ಮೆಂಬರ್ ಕಾರ್ಪಸ್ಟಿಟ್ಯೂಯೆನ್ಸಿ ಇರಬೇಕೇ ಎಂದು ಚರ್ಚೆ ಮಾಡಿ ಸಭೆ ಖಚಿತ ಅಭಿಪ್ರಾಯ ತಿಳಿಸಿದರೆ ಅದಕ್ಕನುಗುಣವಾಗಿ ಸಮಿತಿಯು ಡಿಲಿಮಿಟೇಷ್ಣ ಮಾಡಬಹುದು. ಹಾಗೆ ಮಾಡದಿದ್ದರೆ ಸಮಿತಿಯಲ್ಲಿ ಎಪುಲ ಚರ್ಚೆಯಾಗಬಹುದು. ಆ ಕಾರಣದಿಂದ ಈ ನಿರ್ಣಯವನ್ನು ಚರ್ಚೆ ಮಾಡಿ ಖಚಿತಾಭಿಪ್ರಾಯಕ್ಕೆ ಬರುವುದು ಒಳ್ಳೆಯದು.

Mr. SPEAKER.—Will it not be binding on the Committee?

Sri K. T. BHASHYAM.—Yes, it will be binding on the Committee.

Mr. SPEAKER.—What then is the use of having a Committee at all?

Sri K. T. BHASHYAM.—The Committee will go into the question of distribution of boundary, which will be an important matter and which will be in accordance with the decision of this House. I therefore suggest to the Hon'ble Members of this House that they may give permission for this amendment to be moved.

ರಾಜಮಂತ್ರಪ್ರವೀಣ ಶ್ರೀ ಎಚ್. ಬಿ. ಗುಂಡಪ್ಪ ಗೌಡರು (ಹಾಸನ ಜಿಲ್ಲೆ).—ಸ್ವಾಮಿ, ಒಂದು ವಿಚಾರ ತಿಳಿಸಬೇಕಾಗಿದೆ. ನರ್ಕಾರದ ಮನಸ್ಸಿನಲ್ಲಿ ಏನಿದೆಯೋ ಮಂತ್ರಿಗಳಿಗೆ ಗೊತ್ತಿಲ್ಲ. ಮೊದಲನೆಯ ದಿವನ ಸಾವಕಾಶವಿದೆ, ನಿರ್ಣಯದ ಮೇಲೆ ಮಾತನಾಡಿ ಒಂದು ಖಚಿತ ನಿರ್ಧಾರಕ್ಕೆ ಬರೋಣ, ಆ ಮೇಲೆ ಸಮಿತಿಗೆ ಕಳುಹಿಸೋಣ ಎಂದು ಹೇಳಿದರು. ಈಗ ಪುನಃ ಬೇರೆ ರೀತಿ ಹೇಳುತ್ತಿದ್ದಾರೆ. ಆದರೆ ನಾನು ಹೇಳುವುದಿಷ್ಟು: ಚರ್ಚೆಯಾಗಿದೆ, ಸಮಿತಿಗೆ ಕಳುಹಿಸೋಣ, ಅಲ್ಲಿಂದ ವರದಿಯು ಬಂದ ಮೇಲೆ ಈ ಸಭೆಯೇ ನಿರ್ಣಯ ಮಾಡುವುದು. ಪ್ರೊಸೀಜರ್ ಪ್ರಕಾರವೂ ಇದು ಸರಿಯಾಗಿ ತೋರುತ್ತಿದೆ. ಅವರು ಪಕ್ಷದವರ ತೀರ್ಮಾನವನ್ನು ಈಗ ಹೇಳಿರಬಹುದು. ಆದರೆ ಸಂಪ್ರದಾಯಕ್ಕೂ ಸ್ವಲ್ಪ ನಿಗಾ ಕೊಡಬೇಕು. ಶ್ರೀ ಚಂದ್ರಶೇಖರಯ್ಯನವರು ಕಳುಹಿಸಿರುವ ತಿದ್ದುಪಡಿಯನ್ನು ಮಂಡಿಸುವುದಕ್ಕೂ ಅವಕಾಶವಿಲ್ಲ. ಅವರನ್ನು ಕೇಳಿದಾಗ ಮಂಡಿಸದೇ ಹೋದ್ದರಿಂದ ಅದು ಲ್ಯಾಪ್ಸ್ ಆಗಿದೆ. ಒಂದು ಸಲ ತೀರ್ಮಾನವಾದುದನ್ನು ಪುನಃ ತೆಗೆದುಕೊಳ್ಳುವುದು ಕಾನೂನು ರೀತ್ಯಾ ಸೂಕ್ತವಲ್ಲ, ನಿರ್ಣಯಕ್ಕೆ ತಿದ್ದುಪಡಿಯನ್ನು ಸೂಚಿಸುವ ಕಾಲವೇ ಬೇರೆ. Has the Hon'ble Member given fresh notice of the amendment? He has not. How can he then be asked to revive it? Let us be guided by strict procedure. If a certain thing is against definite procedure, it must not be permitted. Otherwise we would land ourselves in difficulties. Considering from all points of view, it would not be proper that a lapsed subject must be permitted to be revived. It would be against procedure laid down.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ನೆನ್ನೆಯ ದಿನ ಶ್ರೀ ಚಂದ್ರಶೇಖರಯ್ಯನವರು ತಮ್ಮ ತಿದ್ದುಪಡಿಯನ್ನು ಮುಂದಿನುವುದಿಲ್ಲವೆಂದು ಹೇಳಿದರು. ನ್ಯಾಯವಾಗಿ ಈಗ ಅವರೇ ಅದನ್ನು ಮುಂದಿನುವುದಿಲ್ಲವೆಂದು ಹೇಳಬೇಕು. ಇಂತಹ ಸಂದರ್ಭದಲ್ಲಿ ಹಿಂದೆ ಸಭಾಧ್ಯಕ್ಷರಾಗಿದ್ದವರನ್ನು ಸಂಧಿಗ್ಧಕ್ಕೆ ಸಿಕ್ಕಿಸಬಾರದು.

Sri K. T. BHASHYAM.—Sir, procedures are meant for transacting business speedily and without any conflict. If it is helpful to this House to have this amendment before us to give our definite opinion, I think we may be allowed to do so.

Mr. SPEAKER.—If the House agrees, I have no objection. I will put it to the House.

Janab J. MAHOMED IMAM.—The amendment has lapsed having not been moved at the time. It cannot be taken up by the House now.

Mr. SPEAKER.—That question whether to have the amendment or not, I said, will be put to the House.

Janab J. MAHOMED IMAM.—A dead amendment cannot be subject to a vote of the House.

Mr. SPEAKER.—If the House desires .....

Sri K. CHENGALARAYA REDDY (Leader of the House).—Sir, I rise to a point of order. You have stated that you have left the matter to the House either to have the amendment or not. That is the ruling of the Chair. I think there can be no further argument on the ruling given. There may not be any provision in the rules. But the House has got every right to take up any question and consider it.

AN HON'BLE MEMBER.—The Hon'ble Member did not withdraw the amendment. He wanted time to consider to move it.

Mr. SPEAKER.—The Hon'ble Member did not withdraw it. But he said he did not want to move it then.

Sri K. CHENGALARAYA REDDY.—Sir, may I point out that apart from the rules and regulations, the Hon'ble Speaker has some general powers. According to Rule 70 of the Legislative Assembly Standing Orders, "the Speaker shall have power to regulate the conduct of business in the Assembly in all matters not provided for in the Constitution, the rules or the standing orders."

Rajamantrapravina H. B. GUNDAPPA GOWDA.—If they are in the agenda..... .....

Sri K. CHENGALARAYA REDDY.—This is one such case and the Hon'ble Speaker has just now ruled that the amendment could be moved provided the House is agreeable to the same. So there is nothing in the rules against such a course being adopted. The Hon'ble Speaker has given his ruling and I think we may abide by it.

Mr. SPEAKER.—I put it to the House whether it is in favour of taking up the amendment of Sri D. H Chandrasekharaiya into consideration.

(The House gave its assent to consider the amendment of Sri D. H. Chandrasekharaiya.)

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು (ಚಿತ್ರದುರ್ಗ ಜಿಲ್ಲೆ).—ಸ್ಯಾಮಿ, ಈ ತಿದ್ದುಪಡಿಯನ್ನು ಸೂಚಿಸಲು ನನಗೆ ಈ ಮಾನ್ಯ ಸಭೆಯವರೂ ಮತ್ತು ತಾವೂ ಅವಕಾಶ ಕೊಟ್ಟುದಕ್ಕಾಗಿ ತಮಗೂ ಅವರಿಗೂ ನನ್ನ ವಂದನೆಗಳನ್ನರ್ಪಿಸುವುದು ನನ್ನ ಪ್ರಥಮ ಕರ್ತವ್ಯವೆಂದು ಭಾವಿಸುತ್ತೇನೆ. ನಾನು ಸೂಚಿಸತಕ್ಕ ತಿದ್ದುಪಡಿ ಈ ರೀತಿ ಇದೆ :

" That for the words from 'This House' till the end of the Motion, the following words be substituted :—

'That this Assembly is of opinion that the following be taken as the recommendation of this House in regard to the delimitation of constituencies of and the conduct of elections to (*a*) the Legislative Assembly of the State, (*b*) the House of the People.

I. All territorial Constituencies should be single member constituencies except where the scheduled castes are to be provided for.

II. Scheduled castes should be provided for in plural member constituencies of 2 seats each—one general and one reserved for scheduled.

III. The method of voting should be distributive vote.

IV. The coloured box system should be adopted."

ಈ ತಿದ್ದುಪಡಿಯಲ್ಲಿ ಸೂಚಿಸಿರತಕ್ಕ ವಿಷಯಗಳು ಈ ಸಭೆಗೆ ಹೊಸದೇನೂ ಅಲ್ಲ. ಕಳೆದ ಎರಡು ದಿನಗಳಿಂದ ನಡೆಯುತ್ತಿರುವ ಚರ್ಚೆಯಲ್ಲಿ ಇದೇ ವಿಷಯಗಳು ಹೊರಪಟ್ಟಿವೆ. ಅನೇಕ ಮಾನ್ಯ ಸದಸ್ಯರು ಇದರಲ್ಲಿ ಸೂಚಿತವಾಗಿರುವ ಅಭಿಪ್ರಾಯಗಳನ್ನೇ ವ್ಯಕ್ತಪಡಿಸಿದ್ದಾರೆ. ಆದರೂ ಈ ಅಭಿಪ್ರಾಯಗಳು ನಿರ್ದಿಷ್ಟವಾಗಿ ಸಭೆಯ ಮುಂದೆ ಬಂದು ಒಪ್ಪಿಗೆ ಪಡೆದರೆ ಮುಂದೆ ನಾವು ರಚನೆ ಮಾಡಲಿರುವ ಸಮಿತಿಯವರು ಈ ಅಭಿಪ್ರಾಯಗಳನ್ನೇ ಆಧಾರವಾಗಿಟ್ಟುಕೊಂಡು ಕೆಲಸ ಮಾಡಲು ಅನುಕೂಲವಾಗುತ್ತದೆ. ಈ ರೀತಿ ಅವರ

ಕಾರ್ಯವನ್ನು ಸುಲಭಗೊಳಿಸುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇನೆ.

ಈ ತಿದ್ದುಪಡಿಯ ವಿಚಾರದಲ್ಲಿ ನಾನು ಹೆಚ್ಚೇನೂ ಹೇಳಬೇಕಾಗಿಲ್ಲ. ಏಕೆಂದರೆ ನನ್ನೆ ಮೊನ್ನೆಯೆಲ್ಲ ಅನೇಕ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಮಾತನಾಡಿದ್ದಾರೆ. ಈಗ ಜಾರಿಗೆ ಬಂದಿರುವ ಭಾರತ ರಾಜ್ಯಾಂಗ ಕಾನೂನಿನಲ್ಲಿ ಶಾಸನ ಸಭೆಗಳನ್ನು ಯಾವ ರೀತಿ ರಚನೆ ಮಾಡಬೇಕೆಂಬುದನ್ನು ತಿಳಿಸಲಾಗಿದೆ. ಅನಂತರ ಭಾರತದ ಪಾರ್ಲಿಮೆಂಟಿನಿಂದ ಮಂಜೂರಾಗಿರುವ Representation of Peoples Actನಲ್ಲಿ ಯಾವ ಯಾವ ಸಭೆಯಲ್ಲಿ ಎಷ್ಟೆಷ್ಟು ಜನ ಸದಸ್ಯರಿರಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸಿದೆ. ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಯಲ್ಲಿ ಮೈಸೂರು ಸಂಸ್ಥಾನಕ್ಕೆ 6 ಸ್ಥಾನಗಳು ದೊರಕಿವೆ. ಆ ಸ್ಥಾನಗಳಿಗೆ ಪ್ರತಿನಿಧಿಗಳನ್ನಾರಿಸುವ ತಕ್ಕ ವಿಧಾನವನ್ನು ಸದ್ಯದಲ್ಲಿ ಹೇಳಬೇಕಾಗಿಲ್ಲ. ನಮ್ಮ ಸಂಸ್ಥಾನದ ಲೆಜಿಸ್ಲೇಟಿವ್ ಅಸೆಂಬ್ಲಿಯಿಂದ ಅವರನ್ನು ಚುನಾಯಿಸಿ ಕಳುಹಿಸಬೇಕಾಗಿದೆ. ಅವರಿಗೆ ಪ್ರಾದೇಶಿಕ ಚುನಾವಣಾಕ್ಷೇತ್ರಗಳ ಅವಶ್ಯಕತೆ ಇಲ್ಲ. ಇನ್ನು ಕೇಂದ್ರದ House of the Peopleನಲ್ಲಿ ಮೈಸೂರು ಸಂಸ್ಥಾನಕ್ಕೆ 11 ಸ್ಥಾನಗಳಿರಬೇಕೆಂದು ಗೊತ್ತು ಪಡಿಸಿದೆ. ಅದರಂತೆಯೇ ನಮ್ಮ ಸಂಸ್ಥಾನದ ಶಾಸನ ಸಭೆಗಳಾದ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ 99 ಜನ ಸದಸ್ಯರೂ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ 40 ಜನ ಸದಸ್ಯರೂ ಇರಬೇಕೆಂದು ಹೇಳಿದೆ. ಹೀಗೆ Representation of Peoples Actನಲ್ಲಿ ಸ್ಥಾನಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸಿ ಚುನಾವಣಾಕ್ಷೇತ್ರ ಇತ್ಯಾದಿ ಅಂಶಗಳನ್ನು ನಿರ್ಧರಿಸಲು ಅಧಿಕಾರವನ್ನು ರಾಷ್ಟ್ರಾಧ್ಯಕ್ಷರಿಗೆ ವಹಿಸಲಾಗಿದೆ. 6 (2), 9 ಮತ್ತು 11ನೆಯ ಸೆಕ್ಷನ್‌ಗಳಲ್ಲಿ ಹೇಳಿರುವುದೇನೆಂದರೆ:

"As soon as may be after the commencement of this Act, the President shall by order, determine the constituencies into which each State shall be divided, the extent of each constituency, the number of seats allotted to each constituency, and the number of seats, if any, reserved for the scheduled castes or the scheduled tribes in each constituency."

ಪ್ರೆಸಿಡೆಂಟರು ತಮ್ಮ ಆರ್ಡರನ್ನು ಹೊರಡಿಸುವುದಕ್ಕಿಂತ ಪೂರ್ವಭಾವಿಯಾಗಿ ಚುನಾವಣಾ ಕಮಿಷನ್ ಮೂಲಕ ನಲಹೆಗಳನ್ನು ಬರಮಾಡಿಕೊಳ್ಳಬೇಕಾಗಿದೆ. ಅವರು ಭಾರತ ಪಾರ್ಲಿಮೆಂಟಿನ ಸ್ಪೀಕರ್‌ರವರು ನೇಮಿಸಿರುವ ಸಲಹಾ ಸಮಿತಿಗಳ ಮತ್ತು ಪ್ರಾಂತ್ಯ ಸರ್ಕಾರಗಳ ಸಹಾಯದಿಂದ ತಮ್ಮ ನಲಹೆಗಳನ್ನು ಸಿದ್ಧಪಡಿಸಬೇಕಾಗಿದೆ. ಈ ವಿಚಾರದಲ್ಲಿ ನಮ್ಮ ಸರ್ಕಾರದವರು ತಮ್ಮ ನಲಹೆಗಳನ್ನು ಕಳುಹಿಸುವುದಕ್ಕಿಂತ ಮುಂಚಿತವಾಗಿ ನಮ್ಮೆಲ್ಲರ ಅಭಿಪ್ರಾಯಗಳನ್ನು ಕೇಳಿರುತ್ತಾರೆ. ಇದು ಸೂಕ್ತವಾದುದು.

ಪ್ರಕೃತವಿಷಯಕ್ಕೆ ಸಂಬಂಧಪಟ್ಟ ಮುಖ್ಯ ತತ್ವಗಳನ್ನು ಮಾನ್ಯ ಸಚಿವರು ಈಗಾಗಲೇ ಸಭೆಗೆ ತಿಳಿಸಿದ್ದಾರೆ. ಬರೀ ತತ್ವಗಳ ವಿಚಾರದಲ್ಲಿ ಎಷ್ಟು ಬೇಕಾದರೂ ಮಾತನಾಡಬಹುದು, ಆದರೆ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬರಲು ಮಾತ್ರ ಸಾಧ್ಯವಾಗುವುದಿಲ್ಲ. ಇದನ್ನು ತಿಳಿದು ಈಗ ನಮ್ಮ ಮುಂದಿರುವ ತಿದ್ದುಪಡಿ ನಿರ್ದಿಷ್ಟವಾದ ಅಂಶಗಳನ್ನು ನಮೂದಿಸಿ ಈ ಸಭೆಯ ಅಭಿಪ್ರಾಯವನ್ನು ಪಡೆಯಲು ಪ್ರಯತ್ನಿಸಲಾಗಿದೆ. ನನ್ನ ತಿದ್ದುಪಡಿಯಲ್ಲಿ ಮೊಹಲನೆಯದಾಗಿ ಏಕ ಸದಸ್ಯ ಕ್ಷೇತ್ರವಿರಬೇಕೆಂದು ಹೇಳಿದ್ದೇನೆ. ಏಕೆಂದರೆ ಈ ಪದ್ಧತಿಯಿಂದ ಕೆಲಸವು ಸುಲಭವಾಗಿಯೂ ಉತ್ತಮವಾಗಿಯೂ ನಡೆಯುತ್ತದೆ. ಒಳ್ಳೆಯ ರಾಜಕೀಯ ಪಕ್ಷಗಳು ಬೆಳೆಯುವುದಕ್ಕೂ ಅನುಕೂಲವಾಗುತ್ತದೆ. ಈ ಅಭಿಪ್ರಾಯಗಳೇ ಸಭೆಯಲ್ಲಿ ಬಹುಮಟ್ಟಿಗೆ ವ್ಯಕ್ತ ಪಟ್ಟವೆಯೆಂದು ನನ್ನ ಭಾವನೆ. ಇದೇ ರೀತಿಯ ಏರ್ಪಾಡು ಮುಂದುವರಿದ ದೇಶಗಳಾದ ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿಯೂ ಮತ್ತು ಇಂಗ್ಲೆಂಡಿನಲ್ಲಿಯೂ ಜಾರಿಯಲ್ಲಿದೆ.

ಶ್ರೀ ಎಲ್. ಸಿದ್ದಪ್ಪನವರು.—ಇಂಗ್ಲೆಂಡಿನಲ್ಲಿ ಬಹು ಸದಸ್ಯಕ್ಷೇತ್ರಗಳೂ ಉಂಟು.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು — ಅಂತಹ ಕ್ಷೇತ್ರಗಳು ಎಲ್ಲೋ ಕೆಲವು ಇರಬಹುದು. ಒಟ್ಟು 640 ಸದಸ್ಯರಲ್ಲಿ ಸುಮಾರು 20 ಸ್ಥಾನ ಬಹು ಸದಸ್ಯಕ್ಷೇತ್ರಗಳಿಂದ ಬಂದಿದ್ದರೆ ಅದೇ ಹೆಚ್ಚು. ಏಕ ಸದಸ್ಯ ಕ್ಷೇತ್ರಗಳೇ ಎಲ್ಲೆಲ್ಲಿಯೂ ಜಾರಿಯಲ್ಲಿರುವ ಏರ್ಪಾಡಾಗಿದೆ.

ಈಗ ಏಕ ಸದಸ್ಯಕ್ಷೇತ್ರಗಳಿರಬೇಕೆಂದು ಸಭೆಯು ಒಪ್ಪಿದರೆ ಸಮಿತಿಯವರು ಕ್ಷೇತ್ರಗಳನ್ನು ಏಂಗಡಿಸಲು ಅನುಕೂಲವಾಗುತ್ತದೆ. ರೋಪದೋಷಗಳು ಬಾರದಿರುವಂತೆ ಕ್ಷೇತ್ರಗಳನ್ನು ಒಂದೇ ಸಾರಿಗೆ ಏರ್ಪಡಿಸಿದ ಬಹುದು. ಸಾಧ್ಯವಾದಷ್ಟುಮಟ್ಟಿಗೆ ಎಲ್ಲಾ ಕ್ಷೇತ್ರಗಳೂ ರೆವೆನ್ಯೂ ವಿಭಾಗಗಳಿಗೆ ಹೊಂದಿಕೊಂಡಿರುವಂತೆ ಸಮಿತಿಯವರು ಏರ್ಪಾಡುಮಾಡಬೇಕೆಂದು ನಾನೂ ಅಭಿಪ್ರಾಯಪಡುತ್ತೇನೆ. ಈ ಏಕ ಸದಸ್ಯ ಕ್ಷೇತ್ರ ಪದ್ಧತಿ ಅಲ್ಪಸಂಖ್ಯಾತರಿಗೆ ಅನುಕೂಲವಾಗುವುದಿಲ್ಲವೆಂದು ಕೆಲವರು ಹೇಳಿದರು. ಅಲ್ಪ ಸಂಖ್ಯಾತರು, ರಾಜಕೀಯವಾಗಿದ್ದರೆ ಬಹುಸಂಖ್ಯಾತರಾಗಲು ಅವಕಾಶವಿರುತ್ತದೆ. ಆದರೆ ಜಾತಿಮತಗಳ ಆಧಾರದ ಮೇಲೆ ನಿಂತುಕೊಂಡಿರುವ ಅಲ್ಪ ಸಂಖ್ಯಾತರಿಗೆ ನಮ್ಮ ದೇಶದ ರಾಜ್ಯಾಂಗ ರಚನೆಯಲ್ಲಿಯೇ ಅವಕಾಶ ತಪ್ಪಿ ಹೋಗಿದೆ. ಜಾತಿಮತಗಳ ಭೇದದಿಂದ ಆಗಬಹುದಾದ ದುಷ್ಪರಿಣಾಮಗಳನ್ನು ಅನಾನುಕೂಲಗಳನ್ನು ಅನಾಹುತಗಳನ್ನು ನಾವು ಅನುಭವಿಸಿದ್ದೇವೆ. ಆದುದರಿಂದ ಇಂತಹ ಜಾತೀಯ ಅಲ್ಪಸಂಖ್ಯಾತರು ತಮ್ಮ ಹಿಂದಿನ ಮಾರ್ಗಗಳನ್ನು ಪೂರ್ಣವಾಗಿ ಬಿಟ್ಟುಬಿಡುವುದೇ ಲೇಸು. ಏಕ ಸದಸ್ಯಕ್ಷೇತ್ರಗಳಿಂದ, ನಾನು ಆಗಲೇ ಹೇಳಿದಂತೆ, ರಾಜಕೀಯ ಪಕ್ಷಗಳು ಬೆಳೆಯಲು ಅನುಕೂಲ. ಇಂಗ್ಲೆಂಡಿನಲ್ಲಿ ಲಬರಲ್ಸ್, ಲೇಬರ್, ಕನ್ಸರ್‌ವೇಟಿವ್ಸ್ ಮುಂತಾದ ಎಲ್ಲ ಪಂಗಡದವರೂ ತಮ್ಮ ತಮ್ಮ ಪ್ರಭಾವಕ್ಕನುಸಾರವಾಗಿ ಚುನಾಯಿತರಾಗಿ ಬರುತ್ತಾರೆ. ಅವರವರು ಮಾಡತಕ್ಕ ಕೆಲಸಗಳಿಂದ ಒಂದೊಂದು ಸಾರಿ ಒಂದೊಂದು ಪಂಗಡದವರು ಹೆಚ್ಚು ಸಂಖ್ಯೆಯಲ್ಲಿ ಬರುತ್ತಾರೆ. ಅಷ್ಟೆ. ನಾವು ಉತ್ತಮವಾಗಿ ಪ್ರಜಾಪ್ರಭುತ್ವವನ್ನು ನಡಸಲೇಬೇಕೆಂದು ಪ್ರಯತ್ನಪಡುತ್ತಾ ಇರುವುದರಿಂದ ನಾವು ಮಾಡತಕ್ಕ ಏರ್ಪಾಡುಗಳು ಉತ್ತಮ ರೀತಿಯಲ್ಲಿರಬೇಕೆಂದು ನನ್ನ ಅಭಿಪ್ರಾಯ.

ಷೆಡ್ಯೂಲ್ಡ್ ಕೋಮುಗಳಿಗೆ ಕೆಲವು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ರಾಜ್ಯಾಂಗದಲ್ಲಿಯೇ ಹೇಳಿದೆ. ಕ್ಷೇತ್ರಗಳನ್ನೇ ಮೀಸಲಾಗಿಡಬೇಕೆಂದು ಅಲ್ಲಿ ಹೇಳಿಲ್ಲ. ಈ ವಿಚಾರವನ್ನು ಶ್ರೀ ಮಾದಯ್ಯನವರು ನಮ್ಮ ರಾಜ್ಯಾಂಗದ Articles 330 ಮತ್ತು 332 ಇವುಗಳಲ್ಲಿ ಕಾಣಬಹುದು.

ಚುನಾವಣಾ ಕ್ಷೇತ್ರಗಳನ್ನೇ ಈ ರೀತಿ ಪ್ರತ್ಯೇಕಿಸಿದರೆ ಇತರ ದೋಷಗಳು ಸಂಭವಿಸುತ್ತವೆ. ಅಂಥಾ ಕ್ಷೇತ್ರಗಳಿಂದ ಜನರಲ್ ಕ್ಯಾಂಡಿಡೇಟ್ಸ್ ನಿಲ್ಲುವುದಕ್ಕೆ

ಅವಕಾಶ ತಪ್ಪುತ್ತದೆ. ಇದು spirit of the Constitutionಗೆ ವಿರೋಧವಾಗುತ್ತದೆ. ಆದುದರಿಂದ ಎಲ್ಲಾ ಕಡೆಗೂ ಅನ್ವಯಿಸುವಂತೆ ಕ್ಷೇತ್ರಗಳನ್ನು ಮಾಡಿ ಕೆಲವು ಕ್ಷೇತ್ರಗಳಲ್ಲಿ ಷೆಡ್ಯೂರ್ ಪಂಗಡದವರ ಸ್ಥಾನಗಳನ್ನು ಏರ್ಪಡಿಸುವುದು. ಒಂದೇ ದಾರಿ. ಇವು ಮಾತ್ರ ಬಹು ಸದಸ್ಯ ಕ್ಷೇತ್ರವಾಗುವುದು. ಇದೇ ವಿಷಯವನ್ನೇ ನನ್ನ ತಿದ್ದುಪಡಿಯಲ್ಲಿ ಎರಡನೆಯ ಅಂಶವಾಗಿ ಸೂಚಿಸಿದ್ದೇನೆ.

ಮೂರನೆಯ ವಿಷಯವೇನೆಂದರೆ, method of voting should be distributive vote. ಏಕ ಸದಸ್ಯ ಕ್ಷೇತ್ರದಲ್ಲಿ ಮತದಾನಮಾಡತಕ್ಕ ವಿಧಾನವು ಹೇಗಿರಬೇಕೆಂಬುದು ಹುಟ್ಟುವುದೇ ಇಲ್ಲ. ಷೆಡ್ಯೂಲ್ ಪಂಗಡಗಳ ಸ್ಥಾನಗಳು ಇರುವ ಕಡೆ ಬಹು ಸದಸ್ಯ ಕ್ಷೇತ್ರಗಳನ್ನು ಮಾಡಲೇಬೇಕಾಗುತ್ತದೆ. ಆಗ ಡಿಸ್ಟ್ರಿಬ್ಯೂಟೀವ್ ಓಟಿಂಗ್ ಪದ್ಧತಿಯನ್ನು ಜಾರಿಗೆ ತರುವುದು ಬಹಳ ಉತ್ತಮವಾದದ್ದೆಂದು ನಾನು ಸೂಚಿಸುತ್ತೇನೆ.

ನಾಲ್ಕನೆಯದಾಗಿ, coloured box system should be adopted ಎಂದು ಹೇಳಿದ್ದೇನೆ. ಸದ್ಯದಲ್ಲಿ ಇದೇ ಉತ್ತಮವಾದದ್ದೆಂದು ಹಲವು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ದೇಶದಲ್ಲಿ ಹೊಸರಾಜ್ಯಾಂಗದ ಪ್ರಕಾರ 40 ಲಕ್ಷ ಜನ ಓಟುಮಾಡತಕ್ಕವರಾಗಿದ್ದಾರೆ. ಉಮೇದುವಾರರ ವಿಚಾರ ತಿಳಿದುಕೊಳ್ಳುವುದಕ್ಕೂ ಮತ್ತು ತಮಗೆ ಬೇಕಾದ ಹಾಗೆ ಓಟುಮಾಡುವುದಕ್ಕೂ ಅನುಕೂಲವಾಗಬೇಕಾದರೆ ಬಣ್ಣದ ಪೆಟ್ಟಿಗೆ ಪದ್ಧತಿ ಉತ್ತಮವಾದದ್ದೆಂದು ಅನುಭವದಿಂದ ಹೇಳಬಹುದು. ನಾನು ನಮ್ಮ ದೇಶದಲ್ಲಿ ಅನೇಕ ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸಿದ್ದೇನೆ. ಆ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದಿರುವ ಒಂದೆರಡು ವಿಷಯಗಳನ್ನು ತಿಳಿಸುತ್ತೇನೆ. ಎಷ್ಟೋಜನ ಓಟರುಗಳಿಗೆ ಪೆನ್ಸಿಲ್ ಹಿಡಿದುಕೊಳ್ಳಲಿಕ್ಕೆ ಬರುತ್ತಿರಲಿಲ್ಲ. ಇನ್ನು ಕ್ರಾಸ್ ಗುರ್ತುಮಾಡುವ ಕಷ್ಟವನ್ನಂತೂ ಹೇಳಬೇಕಾಗಿಯೇ ಇಲ್ಲ. ಇಂಥ ಸಂದರ್ಭದಲ್ಲಿ ಪೋಲೀಂಗ್ ಆಫೀಸರು ಓಟುಮಾಡುವವರಿಗೆ ಸಹಾಯಮಾಡಬೇಕೆಂದು ವಿಧಿ ಇರುತ್ತೆ. ಆದುದರಿಂದ ಪೋಲಿಂಗ್ ಆಫೀಸರವರೇ ಗುರ್ತುಮಾಡುತ್ತಿದ್ದರು. ಅವರು ಮಾಡುತ್ತಿದ್ದ ಗುರ್ತು ಓಟರುಗಳ ಇಷ್ಟಕ್ಕೆ ಅನುಸಾರವಾಗಿರುತ್ತಿಂಬುದನ್ನು ಹೇಳುವಂತಿರಲಿಲ್ಲ. ಅಲ್ಲದೆ ಪೆನ್ಸಿಲ್ ಹಿಡಿದುಕೊಳ್ಳುವುದಕ್ಕೇ ಬರದವರಿಗೆ ಕ್ರಾಸ್ ಗುರ್ತುಮಾಡುವುದನ್ನು ಹೇಳಿಕೊಟ್ಟು ಓಟುಮಾಡಿಸಬೇಕಾದರೆ ಅರ್ಧಗಂಟೆಯಾದರೂ ಬೇಕಾಗುತ್ತದೆ. ಹೀಗಾದರೆ ಇರುವ ಕಾಲಾವಧಿಯಲ್ಲಿ ಚುನಾವಣೆಯನ್ನು ಮುಗಿಸುವುದು ಸಾಧ್ಯವೇ ಆಗುವುದಿಲ್ಲ. ಆದುದರಿಂದ ಇನ್ನು ಮುಂದಾದರೂ ಬಿನಾನುಕೂಲವಾಗದಂತೆ ಏರ್ಪಡಿಸಿ ಸಾಧ್ಯವಾದಷ್ಟು ಉತ್ತಮವಾದ ರೀತಿಯಲ್ಲಿ ಚುನಾವಣೆ ನಡೆಸುವುದು ಒಳ್ಳೆಯದಾಗಿದೆ. ಬಣ್ಣದ ಪೆಟ್ಟಿಗೆ ಪದ್ಧತಿಯನ್ನು ಸರಿಸುವುದರಿಂದ ಓಟರುಗಳಿಗೆ ಅನಾನುಕೂಲಗಳು ತಪ್ಪಿ ಹೆಚ್ಚು ಸಹಾಯಕವಾಗುತ್ತದೆ ಎಂಬ ಅಭಿಪ್ರಾಯದಿಂದ ಇದನ್ನು ಸೂಚಿಸಿದ್ದೇನೆ.

ಈ ತಿದ್ದುಪಡಿಯಲ್ಲಿ ಸೂಚಿಸಿರತಕ್ಕ ಅಂಶಗಳು ಸಭೆಯಲ್ಲಿ ಚರ್ಚೆಯಾದ ವಿಷಯಗಳೇ ಆಗಿವೆ. ಹೊಸದಾಗಿ ಯಾವುದನ್ನೂ ಸೇರಿಸಿಲ್ಲ. ಸಭೆಯ ಬಹುಮತದ ಅಭಿಪ್ರಾಯವು ಇದಕ್ಕನುಸಾರವಾಗಿ ಇದೆಯೆಂದು ಕಂಡುಬಂದಿದೆ. ಆದುದರಿಂದ ಈ ತಿದ್ದುಪಡಿಯನ್ನು ಸಭೆಯವರು ಅನುಮೋದಿಸಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Amendment moved:

"That for the words from 'This House' till the end of the motion, the following words be substituted:—

'That this Assembly is of opinion that the following be taken as the recommendation of this House in regard to the delimitation of constituencies of and the conduct of elections to (a) the Legislative Assembly of the State (b) the House of the People.

I. All territorial Constituencies should be single member constituencies except where the scheduled castes are to be provided for.

II. Scheduled castes should be provided for in plural member constituencies of 2 seats each—one general and one reserved for scheduled.

III. The method of voting should be distributive vote.

IV. The coloured box system should be adopted'."

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಅಧ್ಯಕ್ಷರೇ, ಎರಡು ದಿನದಿಂದ ಈ ಸಭೆಯ ಮುಂದೆ ಚರ್ಚೆಯಾಗುತ್ತಾ ಇರತಕ್ಕ ವಿಷಯದಲ್ಲಿ ನಾನು ಮಾತನಾಡತಕ್ಕವನಾಗಿರಲಿಲ್ಲ. ಏಕೆಂದರೆ ಈ ವಿಷಯ ಹೇಗೂ ಒಂದು ಸಮಿತಿಯ ಮುಂದೆ ಹೋಗುತ್ತದೆ, ಅವರು ಎಲ್ಲವನ್ನೂ ಪರಿಶೀಲಿಸಿ ವರದಿಮಾಡಿದ ನಂತರ ಈ ಸಭೆಯು ಇನ್ನೊಂದು ಅಧಿವೇಶನ ಸೇರಿದಾಗ ಈ ಸಭೆಯು ಮುಂದೆ ಬರುತ್ತದೆ, ಆಗಲೂ ಮಾತನಾಡುವುದಕ್ಕೆ ಅವಕಾಶವಿರುತ್ತದೆ ಎಂದು ತಿಳಿದು ಮಾತನಾಡಲು ಇಷ್ಟಪಟ್ಟಿರಲಿಲ್ಲ. ಆದರೆ ಶ್ರೀ ಚಂದ್ರಶೇಖರಯ್ಯನವರು ಈ ದಿನ ಈ ಸಭೆಯಮುಂದೆ ಮಂಡಿಸಿರತಕ್ಕ ಈ ತಿದ್ದುಪಡಿ ನಿರ್ಣಯವನ್ನು ನೋಡಿದಮೇಲೆ ನಾನು ಮಾತನಾಡುವುದು ಬಹಳ ಅವಶ್ಯಕವೆಂದು ನನಗೆ ಕಂಡುಬಂದಿದೆ. ಆದ್ದರಿಂದ ನಾನು ಮಾತನಾಡಬೇಕಾಗಿದೆ. ಸಾಧಾರಣವಾಗಿ ಸಮಿತಿಗಳನ್ನು ರಚನೆಮಾಡುವ ಉದ್ದೇಶವೇನೆಂದರೆ, ವಿವಾದಾಸ್ಪದವಾದ ವಿಷಯಗಳು ಅನೇಕವಿರುತ್ತವೆ. ಅವುಗಳನ್ನು ದೊಡ್ಡ ಸಭೆಯ ಮುಂದೆ ಕೂಲಂಕಷವಾಗಿ ಚರ್ಚೆಮಾಡುವುದಕ್ಕೆ ಬದಲಾಗಿ ಒಂದು ಸಣ್ಣ ಸಮಿತಿಗೆ ವಹಿಸಿ ಅವರು ಕೂಲಂಕಷವಾಗಿ ಚರ್ಚೆಮಾಡಿ ತಮ್ಮ ಶಿಫಾರಸನ್ನು ದೊಡ್ಡ ಸಭೆಗೆ ಕಳುಹಿಸಿದ ನಂತರ ಅವುಗಳ ಮೇಲೆ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರಬೇಕೆಂಬುದೇ ಆಗಿದೆ. ಹಾಗೆಯೇ ಒಂದು ಚಿಕ್ಕ ಸಮಿತಿಯನ್ನು ಈ ಸಭೆಯವರು ನಿರ್ಧಾರಮಾಡುವುದರಿಂದ ಆ ಸಮಿತಿಯ ಮುಂದೆ ಈ ವಿವಾದಾಸ್ಪದವಾದ ವಿಷಯಗಳು ಹೋಗಿ ಅಲ್ಲಿ ಕೂಲಂಕಷವಾಗಿ ಚರ್ಚೆಮಾಡಲ್ಪಟ್ಟು ಆ ಸಮಿತಿಯವರು ಏನು ಅಭಿಪ್ರಾಯಪಡುತ್ತಾರೋ ಆ ವಿಷಯಗಳೆಲ್ಲಾ ಈ ಸಭೆಯ ಮುಂದೆ ಬಂದು ಅವುಗಳನ್ನು ಈ ಸಭೆಯವರು ಒಪ್ಪುತ್ತಾರೆಯೇ, ಇಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಒಂದು ಅವಕಾಶವಿರುತ್ತಿತ್ತು. ಈಗ ಶ್ರೀ ಚಂದ್ರಶೇಖರಯ್ಯನವರು ಸೂಚಿಸಿರುವ ತಿದ್ದುಪಡಿಯಂದ ಏನಾಗುತ್ತದೆಂದರೆ, ಆ ಸಮಿತಿಯವರು ಒಂದು ಚೌಕಟ್ಟಿನೊಳಗೆ ಕೆಲಸಮಾಡಬೇಕಾಗುತ್ತದೆ. ಸಿಂಗಲ್‌ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಇರಬೇಕೇ ಅಥವಾ ಮಲ್ಟಿಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಇರಬೇಕೇ, ಬಣ್ಣದ ಪೆಟ್ಟಿಗೆ ಪದ್ಧತಿಯನ್ನು ಅನುಸರಿಸಬೇಕೇ ಅಥವಾ ಬೇರೆ ಯಾವುದಾದರೂ ಪದ್ಧತಿಯನ್ನು ಅನುಸರಿಸಬೇಕೇ, ಎಂಬ ವಿವಾ

ಧಾನ್ಯದವಾದ ವಿಚಾರಗಳಲ್ಲಿ ಆ ಸಮಿತಿಯವರು ಬೇರೆ ನಿರ್ಧಾರಕ್ಕೆ ಬರಲು ಅವಕಾಶವಿದ್ದರೂ ಈ ರೀತಿ ಚೌಕಟ್ಟಿನೊಳಗೆ ಕೆಲಸವಾಗಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಸಮಿತಿಯವರ ಕೈಕಟ್ಟಿದ ಹಾಗಾಗುತ್ತದೆ. ಆ ರೀತಿ ಸಮಿತಿಗೆ ಪ್ರತಿಬಂಧಕವಿರಬಾರದು. ಆ ಸಮಿತಿಯವರು ಕೊಡತಕ್ಕ ವರದಿ ಮುಂದೆ ಈ ಸಭೆಯ ಪರಿಶೀಲನೆಗೆ ಬರುತ್ತದೆ. ಹಾಗಿರುವಾಗಲೂ ಕೂಡ ಈ ಚಿಕ್ಕ ಸಮಿತಿಯ ಕೈನ ಕಾಲು ಕಟ್ಟಿ ಚೌಕಟ್ಟಿನೊಳಗೆ ಕೆಲಸ ಮಾಡಿ ಎಂದು ನಿರ್ಬಂಧಮಾಡುವುದು ಸರಿಯಲ್ಲ.

Sri M. MADIAH (Mysore District—Depressed Class).—On a point of information, Sir It is said in the amendment "that this Assembly is of the opinion that the following shall be the recommendation of this House." Any recommendation may not, in my humble opinion, be binding. I do not know whether it is to be a r commendation to our Government or to the Central Government or to the Parliament of India.

Mr. SPEAKER.—The decision of the House will be there and the Committee cannot change it.

Sri L. SIDDAPPA.—This is a larger body. When this body gives a certain direction to the committee, it is bound to function within those limits and in accordance with the directions given by this House. There is no other way.

Sri K. SAMPANGIRAMIAH (Kolar District—General).—It is 'direction' to the committee and it cannot go beyond that.

Sri L. SIDDAPPA.—Yes, that is my point.

ಆದ್ದರಿಂದ ನನ್ನ ಅಭಿಪ್ರಾಯವೇನೆಂದರೆ, ಈ ಸಭೆಯವರು ಮುಂದೆಯೂ ಕೂಡ, ಶ್ರೀ ಚಂದ್ರಶೇಖರಯ್ಯನವರು ತಂದಿರತಕ್ಕ ತಿದ್ದುಪಡಿಯ ಪ್ರಕಾರವೇ ಬೇಕಾದರೂ ತೀರ್ಮಾನಮಾಡಬೇಕೆಂದರೂ ಅದಕ್ಕೆ ಅವಕಾಶವಿದ್ದೇ ಇದೆ; ಅಂಥ ಅವಕಾಶವಿರುವಾಗಲೂ ಈಗ ಸಭೆಯವರು ಏರ್ಪಡಿಸುವ ಸಮಿತಿಯವರ ಕೈಕಾಲುಗಳನ್ನೇಕೆ ಹೀಗೆ ಕಟ್ಟಿ ಹಾಕಬೇಕೋ ಗೊತ್ತಿಲ್ಲ. ಅವರಿಗೊಂದು ಯಾವ ನಿರ್ಬಂಧವೂ ಇಲ್ಲದ ಅವಕಾಶವನ್ನು ಕೊಡಿ; ವಿಷಯಗಳನ್ನು ಕೂಲಂಕಷವಾಗಿ ಚರ್ಚೆ ಮಾಡಿ ಯಾವುದು ಸೂಕ್ತ, ಯಾವುದಲ್ಲವೆಂಬುದನ್ನು ನಿರ್ಧಾರಮಾಡುವುದಕ್ಕೆ ಹೆಚ್ಚಿನ ಅವಕಾಶ ಕೊಡಿ.

ಆಮೇಲೆ ಈ ತಿದ್ದುಪಡಿಯ merits ಮೇಲೆ ಮಾತನಾಡುವುದಾದರೆ—ಅವರು ತಿದ್ದುಪಡಿಯಲ್ಲಿ ನಮೂದಿಸಿರುವ ಹಾಗೆ ಕೆಲವು ಕಡೆ ಮಲ್ಟಿಮೆಂಬರು ಚುನಾವಣಾ ಕ್ಷೇತ್ರಗಳನ್ನು ಮಾಡುವುದಕ್ಕೂ ಅವಕಾಶಮಾಡಿಕೊಟ್ಟಿದ್ದಾರೆ. ಎಲ್ಲೆಲ್ಲ ಷೆಡ್ಯೂಲ್ ಪಂಗಡದವರಿಗೆ ಸ್ಥಾನಗಳನ್ನು ರಿಸರ್ವ್‌ಮಾಡುತ್ತಾರೋ, ಆ ಪ್ರದೇಶಗಳನ್ನು ಡಬ್ಲುರ್‌ಮೆಂಬರ್ ಚುನಾವಣಾ ಕ್ಷೇತ್ರಗಳಾಗಿ ಮಾಡಬೇಕೆಂದು ಹೇಳಿದ್ದಾರೆ. ಇದೇ ವಾದವನ್ನು ಇನ್ನೂ ಸ್ವಲ್ಪ ಮುಂದುವರಿಸುವುದಾದರೆ,—ಉದಾಹರಣೆಗೆ ಶಿವಮೊಗ್ಗ, ಭದ್ರಾವತಿ—ಇವೆರಡೂ ಈಚೆಗೆ ಒಂದು ಒಂದೂವರೆ ವರ್ಷದಿಂದ ಬೇರೆ ಬೇರೆ ತಾಲ್ಲೂಕಾಗಿಯೇ ವಿಂಗಡಿಸಲ್ಪಟ್ಟಿವೆ; ಇದಕ್ಕೆ ಮುಂಚೆ ಭದ್ರಾವತಿ—ಶಿವಮೊಗ್ಗ ಎರಡೂ ಸೇರಿ ಒಂದು ತಾಲ್ಲೂಕಾಗಿತ್ತು. ಈ ದೃಷ್ಟಿಯಿಂದಲೂ ಮತ್ತು ಅಲ್ಲಿ ಇನ್ನು ಕೆಲವು ವಿಶೇಷ ಸಂದರ್ಭಗಳಿರುವುದರಿಂದಲೂ—ಏನೆಂದರೆ ಭದ್ರಾವತಿಯಲ್ಲಿ ಹೆಚ್ಚಿಗೆ ಕೂಲಿಗಾರರ ಸಂಖ್ಯೆಯಿದೆ ಮತ್ತು ಭದ್ರಾವತಿಯೇ ಒಂದು ಪಟ್ಟಣವೆಂದೂ ಶಿವಮೊಗ್ಗವೇ ಬೇರೊಂದು ಪಟ್ಟಣವೆಂದೂ, ಪರಿಗಣಿಸಲ್ಪಟ್ಟಿದೆ—ಇವೆಲ್ಲಾ ಇರುವುದರಿಂದ ಮೊದಲಿನ ಶಿವಮೊಗ್ಗ ತಾಲ್ಲೂಕ್ ಪ್ರದೇಶದಲ್ಲಿ ಒಂದು ವೇಳೆ ಷೆಡ್ಯೂಲ್ ಪಂಗಡಕ್ಕೆ ರಿಸರ್ವ್‌ಮಾಡಲು ಅವಕಾಶವಿಲ್ಲದೆ ಇದ್ದರೂ, ಅಲ್ಲಿ urban interest, rural interest, labour interest ಇವು ಮೂರೂ ಇರುವುದರಿಂದ ಅಲ್ಲಿಗೂ ರಿಸರ್ವೇಷ್ಮಾಡುವ ಹಾಗೆ ಒಂದು ಡಬ್ಲುರ್‌ಮೆಂಬರ್ ಅಥವಾ ಟ್ರಿಬಲ್‌ಮೆಂಬರ್ ಕ್ಷೇತ್ರವನ್ನು ಏರ್ಪಾಡುಮಾಡುವುದು ಸೂಕ್ತವಲ್ಲವೇ ಎಂಬುದನ್ನು ಸಮಿತಿಯವರು ಯೋಚನೆಮಾಡಿ ಎಲ್ಲರೂ ಒಪ್ಪುವುದಾದರೂ ಹಾಗೆಮಾಡಲೂ ಅವಕಾಶವಿರಬೇಕು. ಇದೇ ರೀತಿ ದಾವಣಗೆರೆ, ಹರಿಹರ ತಾಲ್ಲೂಕುಗಳನ್ನು ನೋಡೋಣ. ದಾವಣಗೆರೆಯಲ್ಲಿ ಕೂಲಿಗಾರರ ಸಂಖ್ಯೆ ಜಾಸ್ತಿಯಿದೆ; ಮತ್ತು ದಾವಣಗೆರೆ ಸಿಟಿ ಮುನಿಸಿಪಾಲಿಟಿಯಾಗಿ ಮಾಡಲ್ಪಟ್ಟಿದೆ. ಆದರೂ ಈಗಿನ ದೃಷ್ಟಿಯಲ್ಲಿ ಅದನ್ನೊಂದು ಮಲ್ಟಿಮೆಂಬರ್ ಕ್ಷೇತ್ರವಾಗಿ ಮಾಡುವುದಕ್ಕೆ ಅವಕಾಶವಿಲ್ಲ. ಏಕೆಂದರೆ ನಿಯಮಗಳ ಪ್ರಕಾರ ಇಂಥಿಂಥಾ ಪ್ರದೇಶದ ಜನಸಂಖ್ಯೆ ಇಷ್ಟಿಷ್ಟು ಎಂದು ಗೊತ್ತುಮಾಡಿರುವುದರಿಂದ, ಅದಕ್ಕನುಸಾರವಾಗಿ ಮಾಡಬೇಕೇ ಹೊರತು, ದಾವಣಗೆರೆ ಸಿಟಿ, ದಾವಣಗೆರೆ ರೂರಲ್ ಏರಿಯಾ, ಅಥವಾ ಪಕ್ಕದಲ್ಲಿರುವ ಹರಿಹರವನ್ನೂ ಸೇರಿಸಿ ಒಂದು ಮಲ್ಟಿಮೆಂಬರ್ ಜುನಾವಣಾ ಕ್ಷೇತ್ರವಾಗಿ ಮಾಡುವುದಕ್ಕೆ ಅವಕಾಶವಿದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆಮಾಡುವುದಕ್ಕೆ ಈ ಶ್ರೀ ಚಂದ್ರಶೇಖರಯ್ಯನವರ ತಿದ್ದುಪಡಿಯಿಂದ ಅವಕಾಶವಿಲ್ಲವಾಗಿದೆ. ಇತ್ತಕಡೆ, ಈ ತಿದ್ದುಪಡಿಯನ್ನು ಒಪ್ಪಿಕೊಳ್ಳದೆ ಇರುವುದರಿಂದ ನಮಗೇನೂ ಬಾಧಕವಿಲ್ಲ. ಸಮಿತಿಯವರು ಯಾವುದಾದರೊಂದು alternative proposal ಕೊಟ್ಟು, ಅದನ್ನು ಸಭೆಯವರು ಪರಿಶೀಲನೆ ಮಾಡಿದಾಗ ಸಭೆಯವರು ತಾವು ಮೊದಲು ಮಾಡಿದ ಸೂಚನೆ ಸರಿಯಾಗಿಲ್ಲವೆಂದು ಅಭಿಪ್ರಾಯಕ್ಕೆ ಬಂದರೂ, ಈ ಒಂದು ತಿದ್ದುಪಡಿಯ ಸಹಾಯದಿಂದ ಅದನ್ನೊಪ್ಪುವುದಕ್ಕೂ ಅವಕಾಶವಿಲ್ಲ. ಈ ಎಲ್ಲಾ ದೃಷ್ಟಿಯಿಂದ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಸಭಾನಾಯಕರು ಕೂಡ ಸಮಿತಿಯ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಅನುಕೂಲವಾಗುವಂತೆ ಮಾಡಲು ಇದನ್ನು ಅಂಗೀಕರಿಸಿಕೂಡದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಮುಂಬರುವ ಮಹಾ ಚುನಾವಣೆಗಳಲ್ಲಿ ನಮ್ಮ ಮೈಸೂರು ಸಂಸ್ಥಾನವನ್ನು ಹೇಗೆ ಚುನಾವಣಾ ಕ್ಷೇತ್ರಗಳಾಗಿ ವಿಂಗಡಿಸಬೇಕು ಮತ್ತು ಚುನಾವಣಾ ಪದ್ಧತಿಯಲ್ಲಿ ಯಾವುದನ್ನನುಸರಿಸಬೇಕೆಂಬ ವಿಷಯದಲ್ಲಿ ನಾನಾ ವಿಧವಾದ ಸಲಹೆಗಳು ಈಗ ಎರಡು ಮೂರು ದಿವಸಗಳಿಂದ ಬರುತ್ತಿರುವುದನ್ನು ಎಲ್ಲರೂ ಕೇಳಿದ್ದಾರೆ. ಆ ಬಗ್ಗೆ ಒಂದು ಸಮಿತಿಯನ್ನೂ ನೇಮಿಸಬೇಕೆಂದು ಹೇಳಿ ಶ್ರೀ ಜಿ. ವೀರಪ್ಪನವರು ಸೂಚಿಸಿ

ದ್ದಾರೆ. ಹೀಗೆ ಸೂಚನೆಮಾಡುವುದರಲ್ಲಿ ಸಮಿತಿಯವರಿಗೆ ಒಂದು ತಿಂಗಳ ಅವಧಿಯನ್ನು ಕೊಟ್ಟು ಅವರು ನಾನಾ ವಿಧವಾದ ಸಾಧಕಬಾಧಕಗಳನ್ನು ಗಮನಿಸಿ ಒಂದು ವರದಿಯನ್ನು ಸಭೆಯ ಮುಂದಿಡಬೇಕೆಂದು ಹೇಳಿದ್ದಾರೆ. ಆದರೆ ಮಾನ್ಯಮಿತ್ರರು ಕೆಲವರು ಹೇಳಿದಂತೆ ಮಹಾಚುನಾವಣೆಗಳು ಬಹಳ ಜಾಗ್ರತೆ ಬರಲವೆ. ಈಚೆಗೇನೋ ಚುನಾವಣಾ ಕಮಿಷನರ್‌ರವರು ಮಾರ್ಚ್ ತಿಂಗಳಿನಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಲಾರದೆಂದು ಹೇಳಿಕೆ ಅಕ್ಟೋಬರ್ ತಿಂಗಳಿಗೆ ಮುಂದುವರಿಸಬೇಕಾಗುತ್ತದೆಂದು ಹೇಳಿಕೆ ಕೊಟ್ಟರೂ ಇಂಡಿಯಾ ಸರ್ಕಾರದವರು ಅದನ್ನು ಒಪ್ಪುತ್ತಾರೋ ಇಲ್ಲವೋ ಹೇಳುವ ಹಾಗಿಲ್ಲ. ಇಂಡಿಯನ್ ಪಾರ್ಲಿಮೆಂಟ್ ಬರುವ ನವಂಬರಿನಲ್ಲಿ ಸೇರುತ್ತದೆಂದು ಗೊತ್ತಾಗಿದೆ. ಈಗಾಗಲೇ ಇದು ಬಹಳ ನಿಧಾನವಾಗಿದೆಯೆಂದು ಹೇಳಬಹುದು. ಈ ವಿಚಾರದಲ್ಲಿ ಅನೇಕರು ಹೇಳಿಕೊಳ್ಳುತ್ತಿರುವುದೂ ಎಲ್ಲರಿಗೂ ಗೊತ್ತಿದೆ. ಅಧಿಕಾರಗಳಲ್ಲಿರತಕ್ಕವರು ಬಹಳ ದಿವಸಗಳವರೆಗೆ ಆ ಸ್ಥಾನಗಳಿಗೆ ಅಂಟಿಕೊಂಡಿರಬೇಕೆಂದು ಹೀಗೆ ಚುನಾವಣೆಗಳನ್ನು ಮುಂದುವರಿಸುತ್ತಿದ್ದಾರೆಂದು ಹೇಳುತ್ತಿದ್ದಾರೆ. ಪಾರ್ಲಿಮೆಂಟಿನ ಸದಸ್ಯರೂ ಸಹ ಆದಷ್ಟು ದಿನ ಸಭೆಯಲ್ಲಿರಬೇಕೆಂದು ನಿಧಾನಿಸುತ್ತಿದ್ದಾರೆಂದು ಹೇಳುತ್ತಿದ್ದಾರೆ. ಆದ್ದರಿಂದ ಹೀಗೆ ಸಮಿತಿಯನ್ನು ನೇಮಕಮಾಡಿ ಅವರು ಒಂದು ತಿಂಗಳವರೆಗೆ ಚರ್ಚೆ ಮಾಡಿ ವರದಿಯನ್ನೊಪ್ಪಿಸಿದನಂತರ ನಾವು ಸಭೆ ಸೇರಿ ನಮ್ಮ ನಲಹೆಗಳನ್ನು ಕಳುಹಿಸುವುದೆಂದರೆ ಬಹಳ ತಡವಾಗುತ್ತದೆ. ಅಲ್ಲದೆ ಈ ವಿಚಾರದಲ್ಲಿ ಅಂಥಾದ್ದೇನೂ Research ಮಾಡುವಂಥಹುದಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಿಮ್ಮ ಅಭಿಪ್ರಾಯದಲ್ಲಿ ಸಮಿತಿಯವರ ವರದಿಯು ಬೇಕಾಗಿಲ್ಲವೆಂತಲೋ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಸಮಿತಿಯವರಿಗೆ ಅಷ್ಟು ಹೆಚ್ಚು ಕಾಲ ಬೇಕಾಗಿಲ್ಲ ಎಂದು ನನ್ನ ಅಭಿಪ್ರಾಯ. ನಾಳೆ ಅಥವಾ ನಾಡಿದ್ದು ಬೇಕಾದರೂ ಕುಳಿತುಕೊಂಡು ಚರ್ಚೆಮಾಡಿ ತೀರ್ಮಾನ ಮಾಡಿಬಿಡಬಹುದು.

ಅಧ್ಯಕ್ಷರು.—ಸಮಿತಿಯವರು ನಿಧಾನವಾಡಿದರೆ ಚುನಾವಣೆಗಳು ನಿಧಾನವಾಗುತ್ತವೆಂದು ತಾವು ಭಾವಿಸುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ನಾವು ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಿ, ಅವರಿಂದ ವರದಿ ತರಿಸಿಕೊಂಡು ಚರ್ಚೆಮಾಡಿ ಕೇಂದ್ರಕ್ಕೆ ಸಲಹೆಗಳನ್ನು ಕಳುಹಿಸುವ ಹೊತ್ತಿಗೆ ನಿಧಾನವಾಗಬಹುದು. ಈ ಎಲ್ಲಾ ಕಾರಣಗಳಿಂದ ಮುಂಬರುವ ಚುನಾವಣೆಗಳೂ ನಿಧಾನವಾಗಬಹುದು, ಹೀಗೆ ಎಲ್ಲಾ ವಿಷಯಗಳನ್ನೂ ಸಮಿತಿಗೇ ಬಿಡುವ ಹಾಗಿದ್ದರೆ ಈಗ ಎರಡು ದಿನಗಳೂ ಚರ್ಚೆ ಮಾಡಲೇ ಬೇಕಾಗಿರಲಿಲ್ಲ. ಅಥವಾ ನಾವೇ ಚರ್ಚೆ ಮಾಡಿ ಸಾಧಕಬಾಧಕಗಳನ್ನೆಲ್ಲಾ ಪರಿಶೀಲಿಸಿ ತೀರ್ಮಾನ ಮಾಡಬಹುದಾಗಿತ್ತು. ಈಗ ಇಲ್ಲಿಯೇ ಎರಡು ದಿವಸ ಚರ್ಚೆಮಾಡಿ ಬಿಟ್ಟಿರುವುದರಿಂದ ಇದರ ವಿಷಯದಲ್ಲಿ ಮೂಲಭೂತವಾದ ಕೆಲವು ವಿಚಾರಗಳಲ್ಲಿ ಖಚಿತ ಅಭಿಪ್ರಾಯಗಳನ್ನು ಹೇಳುವುದರಲ್ಲಿ ಸಮಿತಿಯ ಕಾರ್ಯಕಲಾಪಗಳಿಗೆ ಅಡಚಣೆಯಾಯಿತೆಂದು ಹೇಳುವುದು ಸಾಧುವಲ್ಲ.

ಕೆಲವು ಮೂಲಭೂತವಾದ ತತ್ವಗಳನ್ನು ಆಧಾರವಾಗಿಟ್ಟುಕೊಂಡು ಇಂತಿಂಥಾದ್ದನ್ನು ಹೀಗೇ ಮಾಡಬೇಕು, ಹಾಗೆ ಮಾಡಿದರೆ ಅದರಿಂದ ಉಪಯೋಗವಾಗುತ್ತದೆಂದು ಅನೇಕ ಮೇಧಾವಿಗಳು ನಿರ್ಧರಿಸಿರುವಾಗ ಅದರ ಮೇಲೂ ಅಡ್ಡಿ ಆತಂಕಗಳನ್ನು ತಂದೊಡ್ಡುವುದು ಸರಿಯಾದುದಲ್ಲ. ಹಾಗೆ ಮಾಡಲು ಸಾಧ್ಯವೂ ಇಲ್ಲ. ಈ ಸಂಬಂಧವಾಗಿ ಒಂದು ಸಮಿತಿಯನ್ನು ನೇಮಕ ಮಾಡಲಿರುವುದರಿಂದ ಆ ಸಮಿತಿಯವರು ಇದರ ಸಾಧಕಬಾಧಕಗಳನ್ನೆಲ್ಲಾ ವಿಮರ್ಶೆಮಾಡಿ ನಂತರ ಅಭ್ಯರಾಗಿ ಅವರು ನಮಗೆ ಇದನ್ನು ಹೀಗೆ ಮಾಡತಕ್ಕದ್ದು ಉತ್ತಮ ಮತ್ತು ಸೂಕ್ತ ಎಂಬ ಬಗ್ಗೆ terms of reference ತಿಳಿಸುತ್ತಾರೆ.

ಶ್ರೀ ಎರ್. ಸಿದ್ದಪ್ಪನವರು.—Terms of reference ನಲ್ಲಿ ಯಾವುದು ಉಚಿತ, ಯಾವುದು ಅಲ್ಲ ಎಂಬುದನ್ನು ತಿಳಿಸಿರುವುದಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅನೇಕ ಸಂದರ್ಭಗಳಲ್ಲಿ ಸರ್ಕಾರಿ ಹುಕುಮುಗಳಲ್ಲಿ ಆ ರೀತಿ ನಿರ್ಧರಮಾಡಿ ತಿಳಿಸಿರತಕ್ಕ ನಿದ್ದೇಶಗಳು ಕಂಡು ಬಂದಿವೆ.

ಶ್ರೀ ಎರ್. ಸಿದ್ದಪ್ಪನವರು.—ಅದು ಸರ್ಕಾರಿ ಹುಕ್ಕುಂ ಆಯಿತು, terms of reference ಆಗಲಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಹೀಗೆ ಮಾಡುವುದರಿಂದ ಏನೂ ಬಾಧಕವಾಗುವುದಿಲ್ಲ. ನಮ್ಮ ದೇಶದ ಪರಿಸ್ಥಿತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಇದರ ಹಿತಸಾಧನೆಗೆ ಮತ್ತು ರಕ್ಷಣೆಗೆ ಅನೇಕ ವಿಚಾರಗಳನ್ನು ನಮ್ಮ ಗಮನದಲ್ಲಟ್ಟುಕೊಂಡು ಇದನ್ನು ಪರಿಶೀಲಿಸಬೇಕಾಗಿದೆ. ಕೇವಲ ಒಂದೆರಡು ಅಲ್ಪವಿಚಾರಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಇದನ್ನು ಪರಿಹರಿಸಲು ಸಾಧ್ಯವಿಲ್ಲ. ಕಾಂಗ್ರೆಸ್ಸಿನವರೇ ಎಲ್ಲಾ ಸಂಸ್ಥೆಗಳಲ್ಲಿಯೂ ಸ್ಥಾನಗಳನ್ನು ಆಕ್ರಮಿಸಿಬಿಟ್ಟಿದ್ದಾರೆ, ಅವರೇ ಆಡಳಿತ ವರ್ಗದಲ್ಲಿರುವುದರಿಂದಲೂ ಮತ್ತು ಈ ರೆಜಿಸ್ಲೆಟಿವ್ ಅಸೆಂಬ್ಲಿಯಲ್ಲಿ ಅವರದೇ ಬಹುಮತ ಇರುವುದರಿಂದಲೂ, ಹೀಗೆಲ್ಲಾ ಇತರರ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತಿಲ್ಲ ಎಂಬ ಕೂಗನ್ನು ಕೆಲವು ಮಾನ್ಯ ಸದಸ್ಯರುಗಳಿಂದ ನಾವು ಆಗಾಗ್ಗೆ ಕೇಳುತ್ತಿದ್ದೇವೆ. ಆದರೆ ಆ ಕೂಗು ಬರೀ dictatorial tone ಎಂದು ಹೇಳಬಹುದು. ಆದರೆ ಈಗಿರತಕ್ಕ ಸರ್ಕಾರದವರು ಒಂದು ನಿರ್ದಿಷ್ಟವಾದ ತತ್ವದ ಹಾದಿಯಲ್ಲೇ ಹೋಗುತ್ತಿರುವುದರಿಂದ ಈರೀತಿಯ ಟೀಕೆ ಟಿಪ್ಪಣಿಗಳಿಗೆ ಕಾರಣವೇ ಇಲ್ಲ. ಇದನ್ನು ಆಲೋಚಿಸಿ ನೋಡಿದರೆ ತಮಗೇ ವೇದ್ಯವಾಗುತ್ತದೆ. ಆದರೆ ತಾವು ಒಂದು ಅಂಶ ಕೇಳಬಹುದು, ಸರ್ಕಾರದವರು ಈ ಸಂಬಂಧವಾಗಿ ಒಂದು ನಿರ್ದಿಷ್ಟವಾದ ನೀತಿಯನ್ನು ನಮ್ಮ ಮುಂದಿಟ್ಟು, ಅದರ ಬಗ್ಗೆ ನಮ್ಮೆಲ್ಲರ ಅಭಿಪ್ರಾಯಗಳನ್ನು ಕೇಳಿದ್ದರೆ ಚೆನ್ನಾಗಿರುತ್ತಿತ್ತು ಎಂದು. ಹಾಗೆ ಮಾಡದೆ ಬಿಟ್ಟಿರುವುದು ಈಗ ಒಂದು ಕರ್ತವ್ಯ ಲೋಪವೆಂದು ಕೆಲವರು ಹೇಳುತ್ತಿದ್ದಾರೆ. ಒಂದುವೇಳೆ ಸರ್ಕಾರದವರು ಒಂದು ನಿರ್ದಿಷ್ಟವಾದ ರೀತಿಯಲ್ಲೇ ಇದನ್ನು ಮಂಡಿಸಿದ್ದರೆಂದು ಭಾವಿಸೋಣ. ಆಗಲೂ ಕೂಡ ಟೀಕೆಮಾಡತಕ್ಕವರಿಗೆ ಒಂದಲ್ಲ ಮತ್ತೊಂದು ರೀತಿಯಲ್ಲಿ ಅದರ ಮೇಲೂ ಟೀಕೆಗಳನ್ನು ಮಾಡುತ್ತಿದ್ದರೇ ವಿನಾ ನಮ್ಮನ್ನೆ ಅದನ್ನು ಅನುಮೋದಿಸುತ್ತಿರಲಿಲ್ಲ. ಇದು ಪಾರ್ಟಿ ಪಕ್ಷಗಳ ಸ್ವಭಾವವೇ ಆಗಿರುತ್ತೆ. ಇದರಲ್ಲಿ ಯಾರೂ ಸಂಶಯ ಪಡಬೇಕಾದ ಅಗತ್ಯವಿಲ್ಲ. ಇದೂ ಒಂದು ಮುಖ್ಯವಾದ ವಿಚಾರವೆಂದು ಸರ್ಕಾರದವರು ಭಾವಿಸಿದುದರಿಂದಲೇ ಈ ಸಭೆಯ ಮಾನ್ಯ ಸದಸ್ಯರ ಅಭಿಮತವನ್ನೂ ಇದರ ಬಗ್ಗೆ ಪಡೆಯತಕ್ಕದ್ದು ಉಚಿತವಾದುದೆಂದು ಪರಿಗಣಿಸಿ, ಇದರ ಮೇಲೆ ಇಷ್ಟೊಂದು ಚರ್ಚೆ ನಡೆಯಲಕ್ಕೆ ಅವಕಾ

ಶವಿತ್ತಿರುವುದು ಸರ್ಕಾರದವರ ಉದಾತ್ತ ನೀತಿಯನ್ನೂ ಮತ್ತು ಧ್ಯೇಯವನ್ನೂ ಸೂಚಿಸುತ್ತದೆ. ಇದನ್ನು ವಿರೋಧಪಕ್ಷದ ಮಾನ್ಯ ಸದಸ್ಯರುಗಳು ತಮ್ಮ ಗಮನದಲ್ಲಿಟ್ಟುಕೊಂಡು ತಮ್ಮ ಅಭಿಪ್ರಾಯಗಳನ್ನು ಮತ್ತು ಬೆಂಬಲವನ್ನು ಇದಕ್ಕೆ ನೀಡಬೇಕಾದ್ದು ಉಚಿತವಾಗಿದೆಯೆಂದು ಹೇಳುತ್ತೇನೆ.

ಇನ್ನು ಮೊನ್ನೆ ನಡೆದ ರಾಜ್ಯಾಂಗ ರಚನಾ ಸಭೆಯು ಚುನಾವಣೆಗಳಲ್ಲಿ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿ ಆಧಾರದ ಮೇಲೆ ಮಾಡಿದ್ದರೆ ಜನರಿಗೆ ಎಷ್ಟು ಅನುಕೂಲ ಪ್ರತಿಕೂಲಗಳಿತ್ತೋ ಅಷ್ಟೇ ಅನುಕೂಲ ಪ್ರತಿಕೂಲಗಳು ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿಗೂ ಇತ್ತೆಂಬುದನ್ನು ಮಾನ್ಯ ಸದಸ್ಯರು ಗಮನಿಸಿರಬಹುದು. ಆದುದರಿಂದ ಸಿಂಗಲ್‌ಮೆಂಬರ್ ಕಾನ್ಸ್ಟಿಟ್ಯುಯನ್ಸಿಗಿಂತ ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿ ಉತ್ತಮವೆಂದು ಹೊಡಿರತಕ್ಕ ವಾದ ಸರಿಯಾಗಿಲ್ಲ. ಸಾಧಕ ಬಾಧಕಗಳು ಎರಡರಲ್ಲೂ ಇದ್ದೇ ಇರುತ್ತವೆ. ಮುಖ್ಯವಾಗಿ ಇದರಲ್ಲಿ ದೇಶದ ಹಿತರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಒಟ್ಟು ಜನಾಂಗದ ಅಭಿವೃದ್ಧಿಗೆ ಅನುಕೂಲವಾಗುವಂತೆ ಮಾಡತಕ್ಕದ್ದು ಮುಖ್ಯವೇ ವಿನಾ ಅಲ್ಪಸ್ವಲ್ಪ ವಿಚಾರಗಳಿಗೆಲ್ಲ ಗಮನ ಕೊಡಬಾರದು. ಅಂಥಾ ಪ್ರತಿಪಾದನೆಗಳಿಂದ ಉಪಯೋಗವಿಲ್ಲ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿ ತತ್ವದ ಮೇಲೆ 75–80 ಸಾವಿರ ಪ್ರಜಾಸಂಖ್ಯೆಯುಳ್ಳ ಪ್ರದೇಶವನ್ನು ಒಂದೊಂದು ಭಾಗವಾಗಿ ವಿಂಗಡಿಸಿಕೊಂಡು ಕಲರ್‌ಬಾಕ್ಸ್ ಪದ್ಧತಿಯ ಮೇಲೆ ಚುನಾವಣೆಗಳು ನಡೆಯುವಂತೆ ಮಾಡಿದರೆ ಅದರಿಂದ ಸರ್ವರಿಗೂ ಒಳ್ಳೆಯದಾಗುತ್ತದೆ. ಹಾಗೆ ಮಾಡುವುದರಿಂದ ಯಾವು ದೊಂದು ರಾಜಕೀಯ ಪಕ್ಷವೂ ಅಡಳಿತವನ್ನು ಸಾರೋದ್ಧಾರವಾಗಿ ಆಕ್ರಮಿಸಿಕೊಳ್ಳಲು ಅವಕಾಶವಿರುವುದಿಲ್ಲ. ಇನ್ನೂ ಅನೇಕ ವಿಷಯಗಳನ್ನು ಈಗಾಗಲೇ ನಮ್ಮ ಮಾನ್ಯ ಸ್ನೇಹಿತರುಗಳು ತಿಳಿಸಿರುವುದನ್ನೆಲ್ಲಾ ತಾವು ಗಮನದಲ್ಲಿಟ್ಟುಕೊಂಡು ತಾವೆಲ್ಲರೂ ಇದನ್ನು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಯಾವ ರೀತಿನೀತಿಗಳನ್ನು ಅನುಸರಿಸಿದಾಗ್ಯೂ ಸಾಧಕ ಬಾಧಕಗಳು ಇದ್ದೇ ಇರುತ್ತವೆ. ಎಲ್ಲಾ ದೃಷ್ಟಿಗಳಲ್ಲಿ ಸರ್ವಸಮ್ಮತವಾದಂಥ ರಾಜ್ಯಭಾರ ಕ್ರಮವು ಇಡೀ ಪ್ರಪಂಚದಲ್ಲೇ ಎಲ್ಲಿಯೂ ಇಲ್ಲ. ಆದರೆ ಸಾಧಕಬಾಧಕಗಳಲ್ಲಿ ಯಾವುದರಲ್ಲಿ ಹೆಚ್ಚಿನ ಸಾಧಕಗಳಿರುತ್ತವೋ ಅಥವಾ ಯಾವ ಪದ್ಧತಿಯಲ್ಲಿ ಕೇವಲ ಕಡಿಮೆ ಬಾಧಕಗಳಿರುತ್ತವೆಯೋ ಅಂಥವನ್ನು ಆರಿಸಿಕೊಂಡು ನಾವು ಒಂದು ನಿರ್ಧಾರಕ್ಕೆ ಬರುವುದು ಉಚಿತ.

ಇನ್ನು ಸ್ಥಾನಗಳನ್ನು ಖಾನಲಾಗಿಡಬೇಕೆಂಬ ವಿಚಾರದಲ್ಲಿ ಎರಡು ಮಾತನ್ನು ಹೇಳಬೇಕಾಗಿದೆ. ಕೆಲವರು ಮಾಡಿರತಕ್ಕ ವಾದದ ಪ್ರಕಾರ ಯಾವ ಯಾವ ಜನಾಂಗಗಳವರು ಅವರಿಗೆ 19 ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಹೇಳಿದ್ದಾರೋ ಅದರ ಪ್ರಕಾರ ಮಾಡಬೇಕೆಂದರೆ ಇಡೀ ಸಂಸ್ಥಾನದಲ್ಲಿ ಎಲ್ಲೆಲ್ಲಿ ಈ ಜನಾಂಗದವರಿರುತ್ತಾರೋ ಅಲ್ಲೆಲ್ಲಾ ದಾಮಾಷ ಲೆಕ್ಕದ ಪ್ರಕಾರ 19 ಭಾಗಗಳನ್ನಾಗಿ ಸಂಸ್ಥಾನವನ್ನು ವಿಂಗಡಿಸಬೇಕೆಂದರೆ ಇದು ಎಷ್ಟು ಕಠಿಣವಾದ ಪ್ರಶ್ನೆ! ಸದಸ್ಯರಿಗೆ ಓಟುಮಾಡಲು ಎಷ್ಟು ತೊಂದರೆಯಾಗುತ್ತೆ? ಉಮೇದುವಾರರು ಸುತ್ತುವ ಪ್ರದೇಶದ ವಿಸ್ತೀರ್ಣವೆಷ್ಟು? ಸರ್ಕಾರಕ್ಕೆಷ್ಟು ತೊಂದರೆ? ಆದ್ದರಿಂದ ಹೀಗೆ ಮಾಡುವುದರಲ್ಲಿ ಹರಿಜನರಿಗೆ ಅನುಕೂಲ ಮಾಡುವುದಕ್ಕೆ ಬದಲಾಗಿ ತೊಂದರೆ ಮಾಡಿದಂತಾಗುತ್ತದೆ. ಅಷ್ಟೇ ಅಲ್ಲದೆ ಕಾನೂನಿಗೂ ಇದು ವಿರೋಧವಾಗಿರುತ್ತದೆ. ರಾಜ್ಯಾಂಗಕ್ಕೂ ವಿರೋಧವಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಯಾವ ವಿಧಿಪ್ರಕಾರ ವಿರೋಧವೆಂದು ತಾವು ಹೇಳುತ್ತಿದ್ದೀರಿ?

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಈ ಬಗ್ಗೆ ಚುನಾವಣೆ ಕಮಿಷನರು ಒಂದು ಆಜ್ಞೆಯನ್ನೇ ಹೊರಡಿಸಿದ್ದಾರೆಂದು ಈಗತಾನೆ ಮಾನ್ಯ ಲಾ ಸಚಿವರು ತಿಳಿಸಿದ್ದಾರೆ. Reservations of Constituencies ನಲ್ಲಿ ಬಹಳ ತೊಂದರೆಯಿದೆ. ಅಲ್ಲದೆ ಅದು ಮೂಲ ಭೂತ ಹಕ್ಕುಗಳಿಗೆ ವಿರೋಧವಾಗಿರುತ್ತದೆ. ನಿಮ್ಮ ಪಂಗಡದವರು ನಿಲ್ಲುವ ಕಡೆ ಅವರ ವಿನಾ ಮತ್ತೆ ಬೇರೆ ಕೋಮಿನವರು ನಿಲ್ಲಲು ಅವಕಾಶವಿಲ್ಲದಂತಾಗುತ್ತೆ. It will be nothing but deprivation of the fundamental rights of the people of that constituency. ಇಷ್ಟು ಹೇಳಿ ತಾವೆಲ್ಲರೂ ಇದಕ್ಕೆ ದಯವಿಟ್ಟು ಬೆಂಬಲನೀಡಿ ಇದನ್ನು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು coloured box system ವಿಧಾನದ ಬಗ್ಗೆ ಎರಡು ವಿಚಾರ ತಿಳಿಸಬೇಕಾಗಿದೆ. ಬಹಳ ಹಿಂದಿನಿಂದಲೂ ಇದನ್ನು ಜಾರಿಗೆ ತರಬೇಕೆಂದು ಎಲ್ಲರೂ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಆದಾಗ್ಯೂ ಹಿಂದಿನ ಸರ್ಕಾರದವರು ಅದನ್ನು ಮಾಡಲಿಲ್ಲ. ಇಂಥ ಒಂದು ಸುಗಮವಾದ ಮಾರ್ಗವಿಲ್ಲದೆ ಇದ್ದುದರಿಂದ ಚುನಾವಣೆಯ ಕಾಲದಲ್ಲಿ ಅನೇಕ ರೀತಿಯಲ್ಲಿ ಮೋಸ, ದುಷ್ಕೃತ್ಯಗಳು, ನಡೆಯಲು ಅವಕಾಶ ಉಂಟಾಗಿತ್ತು. ಇಂಥಾದ್ದನ್ನೆಲ್ಲಾ ತಡೆಗಟ್ಟಬೇಕೆಂಬ ಮನೋಭಾವ ಹಿಂದಿದ್ದ ಸರ್ಕಾರಕ್ಕೆ ಇರಲಿಲ್ಲ. ಈಗಿನ ಸರ್ಕಾರದವರು ಇಂಥಾ ಅನ್ಯಾಯಗಳಿಗೆ ಅವಕಾಶವಿರಬಾರದೆಂಬ ಉದ್ದೇಶದಿಂದಲೇ ಈಗ ಈ ವಿಧಾನವೇ ಉತ್ತಮವಾದುದೆಂದು ಹೇಳಿದ್ದಾರೆ. ಇದರಲ್ಲಿ ಅಂಥ ಅನರ್ಥಗಳಿಗೆ ಅವಕಾಶ ಎಲ್ಲ. ಈ ವಿಚಾರದಲ್ಲಿ ಮಾನ್ಯ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಇಂಥಾ ಅನುಕೂಲವಾದ ವಿಧಾನಗಳನ್ನು plural member constituency ಗಳಲ್ಲಿ ತರಲು ಅವಕಾಶ ಎಲ್ಲ. ಮತ್ತು ದೇಶದ ಈಗಿನ ಪರಿಸ್ಥಿತಿಯಲ್ಲಿ ಸಹ ಅದಕ್ಕೆ ಅವಕಾಶವಿಲ್ಲ. ಪ್ರಪೋರ್ಷನಲ್ ರೆಪ್ರೆಸೆಂಟೇಷನ್, ಅಥವಾ ಕ್ಯುಮುಲೇಟಿವ್ ಓಟಿಂಗ್ ಅಥವಾ ಬೇರೆ ಯಾವುದಾದರೂ ಹೊಸ ಪದ್ಧತಿಯನ್ನು ಜಾರಿಗೆ ತಂದರೆ ಈಗಿನ ದೇಶದ ಪರಿಸ್ಥಿತಿಯಲ್ಲಿ ಜನಗಳಿಗೆ ಸರಿಯಾದ ವಿದ್ಯೆಯಿಲ್ಲದಿರುವಾಗ ಅದು ಅರ್ಥವಾಗುವುದಿಲ್ಲ. ಆದರಿಂದ ಬಹಳ ಅನರ್ಥಕ್ಕೆ ಕಾರಣವಾಗುವುದು. ಅದೇ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯಾದರೆ ಬಹಳ ಚಿಕ್ಕದಾದ ಪ್ರದೇಶವೂ ಮತ್ತು ಕಡಿಮೆ ಖರ್ಚೂ ಇರುವುದರಿಂದ ಕೆಲಸ ನಡೆಯುವುದು ಸುಲಭ. ಈ ಎಲ್ಲಾ ಕಾರಣಗಳಿಂದ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರ ತಿದ್ದುಪಡಿಯನ್ನು ಒಪ್ಪಬೇಕು. ಆದರೆ ಶ್ರೀ ವೀರಪ್ಪನವರು ತಂದಿರುವ ತಿದ್ದುಪಡಿಯನ್ನು ಪೂರ್ಣವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ಸವಿಯತರವರು ಪರ್ಯಾಲೋಚಿಸಿ ತಕ್ಷಣ ಒಂದು ವರದಿಯನ್ನು ತಯಾರು ಮಾಡಬೇಕು, ಈ ವಿಷಯದಲ್ಲಿ ಸರ್ಕಾರದವರು ಈಗಾಗಲೇ ಬೇಕಾದಷ್ಟು ಅಂಕಿ ಅಂಶಗಳನ್ನು ಒದಗಿಸಿದ್ದಾರೆ. ಆದ್ದರಿಂದ ತಾಲ್ಲೂಕುಗಳಲ್ಲಿ ಮತ್ತು ಹೋಬಳಿಗಳಲ್ಲಿ ಎಷ್ಟು ಜನಸಂಖ್ಯೆಯಿದೆ ಎಂಬ ಆಧಾರದ ಮೇರೆ ಸ್ಥಾನಗಳನ್ನು ಮೀಸಲಾಗಿಟ್ಟು ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯಿರುವಂತೆ ತತ್ವಗಳನ್ನೆಲ್ಲಾ ತಕ್ಷಣ ಅಡಕಮಾಡಿ ವರದಿಯನ್ನು ತಯಾರಿಸಿ

ನರ್ಕಾರಕ್ಕೆ ನುಲಭವಾಗಿ ಕೊಡಬಹುದು: ಆಮೇಲೆ ಅದನ್ನು ಇಂಡಿಯಾ ನರ್ಕಾರದ ಅಧ್ಯಕ್ಷರಿಗೆ ಕಳುಹಿಸಿ ಅವರ ಒಪ್ಪಿಗೆ ಪಡೆದು ಮುಂದುವರೆನಲು ನಹಾಯ ಕಾರಿಯಾಗುತ್ತದೆ. ಚುನಾವಣೆಗಾಗಿ ಯಾರ ಕ್ಯೆಲಾದರೆ ಅವರು ಪ್ರಚಾರಮಾಡಿ ಕಾರ್ಯಕ್ರಮ ಹಾಕಿ ಚುನಾಯಿತರಾಗಿ ಬರಲು ಜಾಗ್ರತೆ ಅವಕಾಶವಾಗುತ್ತದೆ. ಅಲ್ಲದೆ ಚುನಾವಣೆಯೂ ಬೇಗ ನಡೆಯಬಹುದು ಎಂದು ತಿಳಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇಂಡಿಯಾ ನರ್ಕಾರಕ್ಕೆ ಅಥವಾ ಎಲೆಕ್ಷನ್ ಕಮಿಷನರಿಗೆ ವಿಭಜನೆ ವಿಚಾರದಲ್ಲಿ ಪ್ರಪೋಸಲ್ ಕಳುಹಿಸಿದ್ದೀರಾ?

ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

Sri M. GOVINDA REDDY (Chitaldrug District—General).—Mr. Speaker, I wish to accord my support to the amendment just moved by the Hon'ble Member Sri D. H. Chandrasekharaiya. I have heard the Hon'ble Member Sri L. Siddappa, who advanced some arguments against accepting this amendment. I have heard him say that if we should now decide upon the principles, if this House should now decide whether we should adopt either single-member constituency or plural-member constituency, it should be difficult for the committee later on to adjust their decisions according to the problems that might arise. In support of the argument he has given the example of Harihar labour population *vis a vis* the neighbouring population. I agree that there will be several such problems. But when Sri G. Veerappa moved his amendment, I did not get the impression that the committee which he was proposing was to be left free to decide everything about this question of delimitation of constituencies, and the method of election and all other details. In fact, my own impression was that the committee which he was proposing was for a set purpose of settling the details of delimitation. If he should leave the committee free to discuss everything about it, then we would be groping in the dark. This House does not want a thesis from the committee about elections. All that this House is concerned with is whether it should determine the nature or the extent of the constituencies, the method of election and other details. The territorial details of constituencies cannot be decided by this House. The Committee has to go into the question and come to conclusions. If we leave the committee the freedom to decide all these questions I am afraid, as the Hon'ble the Law Minister pointed out, the Committee may not be able to come to any conclusions at all.

Sri L. SIDDAPPA.—The Committee will not decide anything.

Sri M. GOVINDA REDDY.—The committee sends up final proposals. And we would be wasting our time if we ask the committee to go into those questions at length and then find that the committee has not been able to bring out a unanimous decision or has made conflicting recommendations. Then we would be in the same position as we are now. That was not the purpose for which the committee was constituted. The committee was constituted to work out the principles to be decided upon. Supposing we entrust all this work to the committee, then what will be the stupendous nature of the work that we would be entrusting to them? The question of single-member constituencies is one which is not free from doubt. We may argue that single-member constituencies are very simple in nature and very easy to follow, by an illiterate electorate. The area of the constituencies may be limited so that a candidate may easily go round. The voters also will understand easily the methods and fix the responsibility on them and see that their grievances are properly represented by the candidates. The whole thing will be considered in a determined atmosphere. As against this, equally sound arguments may be advanced that the electorate in India is not a literate electorate, that the Parliamentary system has not taken root; so much so that the voter has no adequate conception of, what the public would consist of, what the Parliamentary character is, or of whom he has to elect and so on. We are now confering for the first time on an adult citizen a suffrage the exercise of which is new experience to him and his knowledge of which is little. In this condition one would be right in entertaining misgivings whether a voter

would be free from harassment, whether a voter will be subjected to influence if the area of the constituencies is very limited and is made narrower. In a country like England, or the United States of America, where they have risen to a certain attainment of literacy and parliamentary work and where there is no economic interdependence, where one house has nothing to do with the other, where the whole question of voting will be forgotten as soon as it is over, there complications may not arise. But in a country like ours every one is dependent upon his neighbour; there is so much of interdependence, for example, if one does not vote for a candidate who may be strong and powerful in the constituency and who may have the might, then he will be apprehending so many things. The position of a member of the Legislature here is a position of power, and in the unsettled economy of our country, a voter has every right to expect material relief, benefits, and so many amenities from a candidate. He will be pinning his faith on a candidate. If that is so, it may be argued whether it would not be fair to give the voter the alternative of selecting more than one candidate, whether if his choice is to be confined to one candidate his aspirations would be realised at all or if his choice should be extended to three or more candidates, he would not have a better choice of turning to be more helpful of them all.

I am only pointing out that this question of single-member constituency or plural-member constituency is not free from doubt. There are arguments for and against it, so much so that we should not leave it for the Committee to decide; when they honestly come to entertain some differences of opinion, they may not come to any conclusion. So, it is for this purpose that Hon'ble D. H. Chandrasekharaiya's amendment should be accepted, or we should decide upon the principles upon which this committee is to proceed. Well, the same may be argued with regard to the method of election. There are different methods differing upon the constituencies which the Hon'ble Law Minister has explained at length on the floor of this House. Well, as he was saying, there are doubts and loopholes in each method. If we should leave it to the Committee to decide upon the method of election, it is highly probable that they may not recommend any single method, or they may recommend a method which may not be acceptable to this House. Instead of beginning again from the beginning after the recommendations have been sent to this House, it would be better for us now alone to decide upon this question. After all according to Sri Chandrasekharaiaya's amendment, we would be taking a decision upon particular principles, which principles we will have to decide, if not to-day, according to Sri Siddappa, at least sometime later. Instead of doing it sometime later and putting the committee to embarrassment, it would be better to give the Committee definite instructions as to the particular lines on which they have to proceed.

I have only one word more to say, because much has been said about the nature and extent of constituencies and the method of election. My point is with regard to the qualifications that should be fixed for the candidate, that question has been left open in the Constitution. According to article 173, which applies to Part B States also, a voter who contests as a candidate must possess such other qualifications as may be prescribed in that behalf or under any law made by Parliament. That gives us scope for recommending. This House may go into that question also and decide as to whether every adult who is to contest should have some educational qualification or some age qualification which are higher than that of the voter, or some property qualification. Something of that nature must be fixed. My own idea is that it would be better that this House should go into that question also and decide upon the principle, because it is a question of principle in the main. If we should allow every adult to contest then we would be taking a very great risk. In the stage of our parliamentary advancement I do not think it would be

advisable to leave it open for every adult to contest elections. Because if an adult should contest elections and if he should be illiterate, if he should not be capable of understanding public affairs and parliamentary methods, then it would be no use. Then such a candidate would be wasting the votes of the voters. The electorate would be helpless and would have to wait for another election if they want their grievances to be redressed, and if they want to be properly represented. So I submit to this House that it would be better to devote some thought upon this side of the matter also. I know that our word in this connection may not be final, that it is the Parliament that should fix the qualification of candidature; but it is left open to us to suggest this qualification.

ಶ್ರೀ ಎಚ್. ಕೆ. ವೀರಣ್ಣಗೌಡರು- (ಮಂಡ್ಯ ಜಿಲ್ಲೆ).— ಸ್ವಾಮಿ, ನಿನ್ನೆಯ ದಿನದಿಂದ ಆದ ಚರ್ಚೆಯಲ್ಲಿ ಈ ಸಭೆಯು ಮಾನ್ಯ ಸದಸ್ಯರು ಕೊಟ್ಟ ನಾನಾ ಸೂಚನೆಗಳನ್ನು ಕೇಳಿದೆ. ಈ ವಿಚಾರದಲ್ಲಿ ಸದಸ್ಯರು ವಿಪುಲವಾಗಿ ಚರ್ಚೆ ಮಾಡಿದ್ದಾರೆ. ಪ್ರತಿಯೊಬ್ಬ ಸದಸ್ಯರೂ ಹೇಳಿದ ಅಭಿಪ್ರಾಯಗಳ ವಿಚಾರದಲ್ಲಿ ಸಾಧಕಬಾಧಕಗಳೇನೆಂಬುದನ್ನೆಲ್ಲಾ ನಾನು ಈಗ ವಿವರಿಸಬೇಕಾದುದಿಲ್ಲ. ಒಟ್ಟಿನಲ್ಲಿ ನನಗೆ ತಿಳಿದಮಟ್ಟಿಗೆ ಸಭೆಯವರು ಏಕ ಸದಸ್ಯ ಕ್ಷೇತ್ರವಿರುವುದರಿಂದ ಮುಂದೆ ಒಳ್ಳೆಯದೆಂದು ಅಭಿಪ್ರಾಯಪಟ್ಟ ಹಾಗೆ ನನಗೆ ಭಾಸವಾಗಿದೆ. ಈಗ ಮಾನ್ಯ ಶ್ರೀ ಚಂದ್ರಶೇಖರಯ್ಯನವರು ತಂದಿರತಕ್ಕ ತಿದ್ದುಪಡಿಯ ಆಶಯವೇನೆಂದರೆ, ಕ್ಷೇತ್ರ ವಿಭಜನೆ ಮಾಡುವುದಕ್ಕೆ ಕೆಲವು ತತ್ವಗಳನ್ನು ಹಾಕಿಕೊಡುವುದು. ಶ್ರೀ ಜಿ. ವೀರಪ್ಪನವರು ಸೂಚಿಸಿರುವ ಸಮಿತಿಗೆ ಹೀಗೆ ನಾವು ಕೆಲವು ಮೂಲತತ್ವಗಳನ್ನು ಹಾಕಿಕೊಟ್ಟರೆ, ಅವರಿಗೆ ನಾವು ವಹಿಸಿರುವ ಕೆಲಸದ ಸಂಬಂಧವಾಗಿ ಅವರು ಆಲೋಚಿಸಿ ಸಲಹೆ ಮಾಡಲು ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ಸೂಚಿಸಿದ್ದಾರೆ. ಈ ಸಭೆಯಲ್ಲಿ ಹೆಚ್ಚು ಮಂದಿ ಸದಸ್ಯರ ಮನೋಭಾವ ಹೇಗಿದೆಯೆಂಬುದನ್ನರಿತು ಈ ತಿದ್ದುಪಡಿಯನ್ನು ಸೂಚಿಸಿದ್ದಾರೆಂದು ಕಾಣುತ್ತದೆ. ಈಗ ಏನೂ ಸೂಚಿಸುವುದು ಬೇಡ, ಎಲ್ಲ ವಿಷಯಗಳನ್ನೂ ನಾವು ಆ ಸಮಿತಿಗೇ ಬಿಡೋಣವೆಂದು ಯಾರಾದರೂ ವಾದ ಮಾಡುವುದಾದರೆ, ಈ ವಿಚಾರ ಚರ್ಚಿಸಲು ನೆನ್ನೆಯ ದಿನದಿಂದ ಈ ಸಭೆಯು ಕಾಲವನ್ನು ಕಳೆಯಲೇ ಬೇಕಾಗಿರಲಿಲ್ಲವೆಂದು ಹೇಳಬೇಕಾಗುತ್ತದೆ. ನೆನ್ನೆಯಿಂದ ನಡೆದ ಚರ್ಚೆಯಿಂದ ಕೆಲವು ಅಭಿಪ್ರಾಯಗಳು ಹೊರಬಿದ್ದಿವೆ. ಅವಕ್ಕೆ ರೂಪುಕೊಟ್ಟು ನಾವು ತೀರ್ಮಾನ ಮಾಡದೇ ಆ ಸಮಿತಿಗೇ ಬಿಡುವುದಾದರೆ, ನೆನ್ನೆಯಿಂದ ಈ ಸಭೆಯ ಕಾಲಹರಣವಾಯಿತೆಂತಲೇ ಭಾವಿಸಬೇಕೇ ಹೊರತು ಅನ್ಯಥಾ ಇಲ್ಲವೆಂದು ನನ್ನ ಅಭಿಪ್ರಾಯ. ಒಂದುವೇಳೆ ಎಲ್ಲವನ್ನೂ ಆ ಸಮಿತಿಗೇ ಬಿಡುವುದಾದರೆ ಆವರು ಮಾಡುವ ಸಲಹೆಗಳನ್ನೆಲ್ಲಾ ಪುನಃ ಮೊದಲಿಂದ ಕೊನೆಯವರೆಗೂ ಈ ಸಭೆ ಕುಳಿತು ಚರ್ಚೆಮಾಡಿ ತೀರ್ಮಾನಮಾಡಲು ಕಾಲ ವ್ಯರ್ಥವಾಗುತ್ತದೆ. ಹಾಗಿದ್ದರೆ ನೆನ್ನೆಯೇ ಆ ಸಮಿತಿಯನ್ನು ನೇಮಿಸಿ ಅದಕ್ಕೇ ಬಿಟ್ಟು ಕೊಟ್ಟಿದ್ದರೆ ಇದುವರೆಗೆ ಚರ್ಚೆಮಾಡಬೇಕಾಗಿರಲಿಲ್ಲ. ಆದರೆ ನೆನ್ನೆಯ ದಿನದಿಂದ ಸಭೆಯಲ್ಲಿ ಈ ವಿಚಾರವನ್ನು ಚರ್ಚಿಸಿ, ಸಭೆಯ ಅಭಿಪ್ರಾಯವನ್ನು ಮನಗಂಡು, ಗಾಳಿ ಯಾವ ಕಡೆ ಬೀಸುತ್ತದೆಂಬುದನ್ನು ಕುರಿತು ಸಭೆಯ ಕಾಲ ಉಳಿತಾಯವಾಗಲು, ಸಮಿತಿಯವರಿಗೆ ಕೆಲವು ತತ್ವಗಳನ್ನು ಹಾಕಿ ಕೊಡೋಣ, ಅದರ ಮೇಲೆ ಅವರು ಕೆಲಸ ಮಾಡಲಿ ಎಂದು ತಿದ್ದುಪಡಿ ಸೂಚಿಸಿದ್ದಾರೆ. ನೆನ್ನೆಯಿಂದ ನಡೆದಿರತಕ್ಕ ಚರ್ಚೆಯಲ್ಲಿ ಬಹುಭಾಗ ಸದಸ್ಯರು ಏಕ ಸದಸ್ಯ ಕ್ಷೇತ್ರವಿರಬೇಕೆಂದು ಹೇಳಿದ್ದಾರೆ. ಆದರೆ ಸಮಿತಿಯಲ್ಲಿರತಕ್ಕ ಸದಸ್ಯರು ಬಹುಮಂದಿ ಸದಸ್ಯರಿರುವ ಕ್ಷೇತ್ರಗಳಿರಬೇಕೆಂದು ಹೇಳಿ ಅಸಮ್ಮತಿ ಸೂಚಿಸಲು, ಭಿನ್ನಾಭಿಪ್ರಾಯ ಸೂಚಿಸಲು, ಅವಕಾಶವಿರಬಾರದೆಂದು ನನ್ನ ಅಭಿಪ್ರಾಯ. ಆಮೇಲೆ ಕ್ಷೇತ್ರ ವಿಭಜನೆಯ ವಿಚಾರದಲ್ಲಿ ಸಮಿತಿಯವರು ತಾಲ್ಲೂಕುಗಳನ್ನು ಮಾತ್ರ ಸ್ವಲ್ಪಸ್ವಲ್ಪ ಬದರಾಯಿಸಿಕೊಟ್ಟರೆ ಅಲ್ಲಿ ಅಸಮ್ಮತಿ ಸೂಚಿಸುವ ಸದಸ್ಯರು ಈಗಿನ ತಾಲ್ಲೂಕು ಮತ್ತು ಜಿಲ್ಲೆಗಳನ್ನೆಲ್ಲಾ ಬಿಟ್ಟು ಬೇರೆ ಕ್ಷೇತ್ರಗಳನ್ನೇ ಮಾಡಬೇಕೆಂದು ಬರೆಯಬಹುದು; ಅಥವಾ ಮೈನಾರಿಟಿ ಕೋಮುಗಳ ವಿಚಾರ ಮುಂತಾದ ವಿಷಯಗಳಲ್ಲಿ ಬೇರೆ ಬೇರೆ ರೀತಿಯ ನಲಹೆಗಳನ್ನು ಕೊಡಬಹುದು. ಹಾಗಾದರೆ ಆಗ ಈ ಸಭೆ ಕುಳಿತು ಮತ್ತೆ ಆ ವಿಷಯಗಳ ಮೇಲೆ ಚರ್ಚೆ ನಡೆಸಬೇಕಾಗುತ್ತದೆ. ಅದೆಲ್ಲಾ ಅನಾವಶ್ಯಕ. ಅದಕ್ಕೆ ಈಗ ನಮ್ಮ ಅಭಿಪ್ರಾಯ ರೂಪುಗೊಂಡರೆ, ಅದನ್ನು ಸಮಿತಿಗೆ ಸೂಚಿಸಿದರೆ, ಅದರ ಆಧಾರದ ಮೇಲೆ ತೀರ್ಮಾನಮಾಡಲು ಅವರಿಗೆ ಅನುಕೂಲವಾಗುತ್ತದೆ. "To advise Government" ಎಂದು ತಿದ್ದುಪಡಿಯಲ್ಲಿದೆ. ಅದನ್ನು ಸರ್ಕಾರದವರೂ ಒಪ್ಪಿದ್ದಾರೆ. ಮುಂದಿನ ಅಧಿವೇಶನದಲ್ಲಿ ಸಮಿತಿ ವರದಿಯಮೇರೆ ನಮ್ಮ ಅಭಿಪ್ರಾಯವನ್ನು ಪಡೆಯುತ್ತೇವೆಂದೂ ಸರ್ಕಾರದವರು ಹೇಳಿದ್ದಾರೆ. ಆದ್ದರಿಂದ ಈ ತಿದ್ದುಪಡಿಯನ್ನು ಒಪ್ಪಿದರೆ, ನಮಗೂ ಕಾಲ ಮಿಗುತ್ತದೆ, ಸಮಿತಿಗೆ ಕೆಲಸ ಸುಲಭವಾಗುತ್ತದೆ. ಸಮಿತಿಯ ವರದಿಯಲ್ಲಿ dissenting note ಬರುವುದಕ್ಕೆ ಅವಕಾಶವಿರುವುದಿಲ್ಲ. ಕ್ಷೇತ್ರಗಳ ನರಹದ್ದುಗಳನ್ನು ಗೊತ್ತುಮಾಡುವ ಕೆಲಸವನ್ನು 60-70 ಜನರು ಕುಳಿತು ಮಾಡುವುದಕ್ಕೆ ಬದಲು ನಾಲ್ಕಾರು ಜನರು ಕುಳಿತು ಮಾಡಿದರೆ ಕೆಲಸವನು ಜಾಗ್ರತೆ ಮುಗಿಸುವುದಕ್ಕೆ ಅನುಕೂಲವಾಗುತ್ತದೆ. ಬೇಗ ನಮ್ಮ ಶಿಫಾರಸನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವುದಕ್ಕೂ ಅನುಕೂಲವಾಗುತ್ತದೆ. ಈ ಎಲ್ಲ ಉದ್ದೇಶಗಳನ್ನೂ ಇಟ್ಟುಕೊಂಡು ಶ್ರೀ ಚಂದ್ರಶೇಖರಯ್ಯನವರು ಈ ತಿದ್ದುಪಡಿ ಸೂಚಿಸಿದ್ದಾರೆಂದು ನನ್ನ ಭಾವನೆ. ಇದರ ಅರ್ಥ ಶ್ರೀ ಸಿದ್ದಪ್ಪನವರು ಅರಿತಿರಲಿಲ್ಲವೆಂದು ಭಾವಿಸಿ ಉತ್ತರ ಹೇಳುತ್ತಿದ್ದೇನೆಂದು ಯಾರೂ ತಿಳಿಯಬಾರದು. ನೆನ್ನೆಯಿಂದಲೂ ಈ ವಿಷಯದಲ್ಲಿ ಚರ್ಚೆ ನಡೆಯುತ್ತಾ ಇದೆ. ಹಿಂದಿನ ಅಧಿವೇಶನಗಳಲ್ಲೂ ನೋಡುತ್ತಾ ಇದ್ದೇವೆ. ಕಾಂಗ್ರೆಸ್ ಪಾರ್ಟಿಯವರು ಇಲ್ಲಿ ಮೆಜಾರಿಟಿಯಲ್ಲಿರುವುದರಿಂದ ನಾವು ನಮ್ಮ ಪ್ರಭಾವವನ್ನು ಬೀರಬೇಕೆಂದು ನನ್ನ ಅಭಿಪ್ರಾಯವಲ್ಲ. ಆದರೆ ಒಂದು ಅಂಶ ಎದ್ದು ಕಾಣುತ್ತದೆ. ಏನಾದರೂ ಆಗಲೀ ಮೆಜಾರಿಟಿ ಪಾರ್ಟಿಯವರು ಹೇಳಿದ್ದನ್ನು ನಾವು ವಿರೋಧ ಮಾಡಬೇಕೆಂಬ ಭಾವನೆಯಿಂದ ವಿರೋಧ ಪಕ್ಷದ ಕೆಲವು ಮಾನ್ಯ ಸ್ನೇಹಿತರು ವಿರೋಧ ಮಾಡುತ್ತಾರೆಂಬ ಅಭಿಪ್ರಾಯ ಕೆಲವು ಸ್ನೇಹಿತರ ಮನಸ್ಸಿನಲ್ಲುಂಟಾಗಿದೆ. ಅದನ್ನು ಮಾನ್ಯ ಶ್ರೀ ಲಿಂಗಾರೆಡ್ಡಿಯವರು ಹೇಳಿದ್ದಾರೆ.

ಶ್ರೀ ಎರ್. ಸಿದ್ದಪ್ಪನವರು.—ಅದು ತಪ್ಪು.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗಿಲ್ಲದಿದ್ದರೆ ಸಂತೋಷ. ಆದ್ದರಿಂದ ನ್ಯಾಯ ಅನ್ಯಾಯ ವಿಮರ್ಶೆ ಮಾಡಬೇಕು. ಉದ್ದೇಶವೇನು ಎಂಬುದನ್ನು ನೋಡ ಬೇಕು. ಈ ವಿಷಯದಲ್ಲಿ ನೆನ್ನೆಯಿಂದ ನಾವು ಕಾಲ ಕಳೆಯುತ್ತಿದ್ದೇವೆ. ಶ್ರೀ ಚಂದ್ರಶೇಖರಯ್ಯನವರು ಮತ್ತು ಶ್ರೀ ವೀರಪ್ಪನವರು ತಂದಿರತಕ್ಕ ತಿದ್ದು ಪಡಿಗಳನ್ನು ಮಾನ್ಯ ಸದಸ್ಯರು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

(Janab J. Mahomed Imam stood up to speak).

ಅಧ್ಯಕ್ಷರು.—ಏನಾದರೂ ಹೊಸದಾಗಿ ಹೇಳುವುದು ಇದ್ದರೆ ಹೇಳಿ.

ಜನಾಬ್ ಜೆ. ಮಹಮದ್ ಇಮಾಂರವರು.—ಮಾನ್ಯ ಅಧ್ಯಕ್ಷರಲ್ಲೂ ಮತ್ತು ಸದಸ್ಯರಲ್ಲೂ ಈ ಸಭೆಯ ಕಾಲ ವನ್ನು ಅನಾವಶ್ಯಕವಾಗಿ ನಾನು ಎಂದಿಗೂ ಕಳೆಯುವು ದಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆ. ಅಥವಾ ಬೇರೆ ಯವರು ಹೇಳಿದ್ದನ್ನೇ ನಾನು ಹೇಳುವುದಿಲ್ಲ. ಆ ರೀತಿ ಏನಾದರೂ ಆದರೆ ನನ್ನ ಭಾಷಣವನ್ನು ಮುಂದುವರಿ ಸುವುದಿಲ್ಲ. ಕೆಲವು ಮುಖ್ಯವಾದ ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಈ ಡೀಲಮಿ ಟೇಷನ್ ವಿಚಾರದಲ್ಲಿ ನೆನ್ನೆಯಿಂದ ಭಾಷಣಗಳಾಗಿವೆ. ಕಾಲಕ್ಕೆ ತಕ್ಕಂತೆ ಮನೋಭಾವಗಳೂ ಕೂಡ ಬದಲಾ ವಣೆಯಾಗಿರುವುದನ್ನು ನೋಡಿದರೆ ನನಗೇನೋ ಬಹಳ ವಿಷಾದವಾಗುತ್ತದೆ.

Sri H. C. DASAPPA.—But you are smiling !

Sri T. SUBRAMANYA.— There is nothing wrong, Sir. By argument and persuasion, I can win him over. He may change his view.

ಜನಾಬ್ ಜೆ. ಮಹಮದ್ ಇಮಾಂರವರು.—ನೆನ್ನೆಯ ದಿನ ಮಾನ್ಯ ಶ್ರೀ ವೀರಪ್ಪನವರು ಅವರ ತಿದ್ದುಪಡಿ ಯನ್ನು ಸಭೆಯ ಮುಂದೆ ಮಂಡಿಸಿದರು. ಸಾಧಾರಣ ವಾಗಿ ಅವರ ತಿದ್ದುಪಡಿ ಎಲ್ಲರಿಗೂ ಒಂದು ರೀತಿಯಲ್ಲಿ ಸಮಂಜಸವಾಗಿತ್ತು. ಈ ವಿಷಯದಲ್ಲಿ ಇನ್ನೂ ಅನೇಕರ ಅಭಿಪ್ರಾಯ ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಮುಖ್ಯ ಮಂತ್ರಿಗಳು ಇವತ್ತು ಸಹ ಚರ್ಚೆಗೆ ಅವಕಾಶ ಕೊಟ್ಟರು. ನನ್ನ ಅಭಿಪ್ರಾಯವೇನೆಂದರೆ ಇಂಥಾ ಪ್ರಾಮುಖ್ಯವಾದ ವಿಷಯ, ಪವಿತ್ರವಾದ ವಿಷಯ, ಎಲ್ಲ ರಿಗೂ ಸರಿಯಾದ ನ್ಯಾಯ ದೊರಕಬೇಕಾದ ವಿಷಯ ಪಾರ್ಟಿ ವಿಷಯವಾಗಿ ಮಾಡಿಕೊಂಡಿರುವುದು ಬಹಳ ವಿಷಾದವಾದದ್ದು. ನನ್ನ ಅವರ ಮನೋಭಾವವೇ ನಿತ್ಕೃಷ್ಟವಾಗಿ ಅದು ಇಂದು ಬದಲಾವಣೆಯಾಗಿದೆ. ನೆನ್ನೆ ಒಂದು ತಿಂಗಳಿನಲ್ಲಿ ಆಗಬೇಕೆಂದು ಹೇಳುತ್ತಿದ್ದುದು ಈವತ್ತು ಒಂದು ವಾರಕ್ಕೆ ಇಳಿದಿದೆ. ನಾಳೆ ಸೋಮವಾರದೊಳಗೇ ಸಮಿತಿಯವರು ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳಬಹುದು. ಏಕೆಂದರೆ ಸಮಿತಿಯೊಳಗಿರುವ ಸದಸ್ಯರ ಅಭಿಪ್ರಾಯ ಹೇಗಿರುತ್ತದೆಯೋ ಏನೋ ಎಂಬ ಅನುಮಾನದಿಂದ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಕ್ಷೇತ್ರದಲ್ಲಿ ಏನಾಗುತ್ತದೋ ಎಂಬ ಸಂಶಯ ಇರುವಹಾಗೆ ಕಾಣುತ್ತದೆ.

ಅಧ್ಯಕ್ಷರು.—ಹೊಸ ವಿಷಯ ಏನೂ ಇಲ್ಲ!

ಜನಾಬ್ ಜೆ. ಮಹಮದ್ ಇಮಾಂರವರು.—ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ, ಭರವಸೆ ಹುಟ್ಟುವ ಹಾಗೆ, ನಂಬಿಕೆ ಬರುವಹಾಗೆ ಈ ಪವಿತ್ರ ವಿಷಯದಲ್ಲಿ ಸರ್ಕಾರದವರು ಒಂದು ನೀತಿಯನ್ನು ನಿರೂಪಿಸಬೇಕಾದ್ದು ಅತ್ಯಾವಶ್ಯಕ. ಮಾನ್ಯ ಶ್ರೀ ಚಂದ್ರಶೇಖರಯ್ಯನವರು ಸಮಿತಿಯ ಕಾರ್ಯಕಲಾಪಗಳಿಗೆ ಅನುಕೂಲ ಮಾಡುವ ದಕ್ಕಾಗಿ ಈ ತಿದ್ದುಪಡಿಯನ್ನು ತರಲಾಗಿದೆ ಎಂದು ಹೇಳಿ ದರು. ನೆನ್ನೆಯ ದಿನ ಇದು ಅವರಿಗೆ ತಿಳಿದಿರಲಿಲ್ಲ. ಈ ದಿನ ಬೆಳಿಗ್ಯೆ ಪಾರ್ಟಿ ಮೀಟಿಂಗ್ ಆದಮೇಲೆ ಈ ತಿದ್ದು ಪಡಿ ಸೂಚಿಸಬೇಕಾಯಿತು ಎಂದು ಕಾಣುತ್ತದೆ. ಆ ರೀತಿ ಅನುಕೂಲ ಮಾಡುತ್ತೇವೆ ಎಂದು ಹೇಳುವುದಾ ದರೆ ಈ ಸಭೆಯಿಂದ ಹೌಸ್ ಕಮಿಟಿ, ಹಕ್ಕುಬಾಧ್ಯತೆ ಗಳ ಕಮಿಟಿ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿ ಗಳನ್ನು ರಚನೆ ಮಾಡುತ್ತೀರಿ. ಅವುಗಳಿಗೆಲ್ಲಾ ಏಕೆ ಇದೇ ರೀತಿ ಪೀಠಿಕೆ ಹಾಕಿತ್ತಿಲ್ಲ?

ಅಧ್ಯಕ್ಷರು.—ಹೌಸ್ ಕಮಿಟಿ ಹಕ್ಕು ಬಾಧ್ಯತೆಗಳ ಕಮಿಟಿ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿ ಕೆಲಸ ಕಾರ್ಯಗಳು ನಿಗದಿಯಾಗಿವೆ.

Sri M. V. KRISHNAPPA.—He cannot attribute motives, Sir.

Janab J. MAHOMED IMAM.—When this House appoints any committee, it will have full confidence in the committee and gives that committee full scope, whether it be Public Accounts Committee or any other committee.

Mr. SPEAKER.—Is it unusual to give directions ?

Janab J. MAHOMED IMAM.—It is quite unusual. I do not find such a thing done anywhere except giving terms of reference. You can say " we will have single-member constituency or double-member constituency".

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಮದರಾಸು ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಈ ವಿಷಯ ಚರ್ಚೆಯಾಗಿದೆ. ಅಲ್ಲಿ ಇದೇ ರೀತಿ ನಿರ್ದಿಷ್ಟವಾಗಿ ತಂದು ಚರ್ಚೆ ಮಾಡಿದ್ದಾರೆ. ಹೀಗೆ ಎಲ್ಲೂ ಮಾಡಿಲ್ಲವೆಂದು ಹೇಳಬೇಡಿ.

Sri L. SIDDAPPA.—That would be the final decision to the House. They were not directions to any committee.

ಶ್ರೀ ಡಿ.ಎಚ್. ಚಂದ್ರಶೇಖರಯ್ಯನವರು.—ಆಜ್ಞೆರು ತೀರ್ಮಾನವನ್ನು ಕೂಡ ಅಲ್ಲಿ ಇದೇ ರೂಪದಲ್ಲಿ ಇಟ್ಟಿದ್ದಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಯಾವ ಸಮಿತಿಯನ್ನು ರಚನೆ ಮಾಡಲಿ, terms of reference ಮಾಡುತ್ತಾರೆಯೇ ಹೊರತು ಈ ರೀತಿ ನಿರ್ಧರಿಸಿ ಹೀಗೆಯೇ ಮಾಡಬೇಕೆಂದು ಹೇಳುವುದಿಲ್ಲ. ಈ ವಿಷಯಗಳನ್ನೆಲ್ಲಾ ಸಮಿತಿಯವರಿಗೆ ಬಿಡಬೇಕು. ಅಲ್ಲಿ ಪ್ರಾಜ್ಞರು ಇರುತ್ತಾರೆ, ಪ್ರವೀಣರು ಇರುತ್ತಾರೆ. ಅವಶ್ಯಕತೆ ಕಂಡು ಬಂದರೆ ದೇಶದ ನಾನಾ ಭಾಗಗಳಲ್ಲಿ ಸಂಚಾರ ಮಾಡಿ ಅನೇಕರ ಅಭಿಪ್ರಾಯವನ್ನು ತೆಗೆದುಕೊಂಡು ಇತರ ಕಡೆಗಳವರು ಹೇಗೆ ಮಾಡುತ್ತಾರೆಂಬುದನ್ನು ವಿಚಾರ ಮಾಡಿ ಅವರ ವರದಿಯನ್ನು ಈ ಸಭೆಗೆ ಕಳುಹಿಸುತ್ತಾರೆ. ಅವರ ಸಲಹೆಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರ ಈ ಸಭೆಗೆ ಇದೆ. ಬೇಕಾದ

ರೀತಿಯಲ್ಲಿ ಬದಲಾವಣೆ ಮಾಡಬಹುದು. ಅದಕ್ಕೆ ಮುಂಚೆಯೇ ನೀವು ಇದೇ ರೀತಿ ಮಾಡಬೇಕೆಂದು ಸಮಿತಿಯವರಿಗೆ ನಿರ್ಬಂಧ ಮಾಡುವುದು ಸರಿಯಲ್ಲ. This is quite unusual. Such a restriction has never been prescribed. ಇಂಥಾ ಕ್ರಮವನ್ನು ಎಲ್ಲೆಲ್ಲೂ ಕಾಣೆ. ನಾನೂ 20 ವರ್ಷದಿಂದ ರಾಜಕೀಯದಲ್ಲಿ ಇದ್ದೇನೆ. ಈ ರೀತಿ ಎಲ್ಲೂ ನಡೆದಿಲ್ಲ.

(*Interruption.*)

The very fact that my friends are interrupting me so much shows that everybody is very much interested in this. All of them are interested in this.

Sri K. PUTTASWAMY.—Is the Hon'ble Member not interested in it ?

Janab J MAHOMED IMAM.—Let not the Hon'ble Member tangle me in that. I am not interested in that. I want to do justice to one and all.

Sri K. PUTTASWAMY.—We are all interested in doing justice.

ಜನಾಬ್ ಜೆ. ಮಹಮದ್ ಇಮಾಂರವರು.—ನಾನು ಮೊದಲೇ ಹೇಳಿದೆ, ಇದನ್ನು ಪಾರ್ಟಿ ವಿಷಯವನ್ನಾಗಿ ತೆಗೆದುಕೊಳ್ಳಕೂಡದು. To ensure fair and free elections this is very necessary. ಆ ದೃಷ್ಟಿಯಿಂದ ನೋಡಬೇಕಾದರೆ ಸರ್ಕಾರದಲ್ಲಿರುವವರು ಈ ವಿಷಯದಲ್ಲಿ ಯಾವ ಪಾರ್ಟಿಯ ಕಡೆಯನ್ನೂ ವಹಿಸಕೂಡದು. ವಾಸ್ತವವಾಗಿ ಸರ್ಕಾರದ ಸ್ಥಾನದಲ್ಲಿರುವವರಿಗೆ ಅವರು ಯಾವ ಪಾರ್ಟಿಗೂ ಸೇರಿಲ್ಲ. ಎಲ್ಲರಿಗೂ ನ್ಯಾಯವಿರುವಹಾಗೆ ಅವರು ಕೆಲಸ ಮಾಡಬೇಕು. ನ್ಯಾಯವಾಗಿ ಎರೆಕ್ಟ್ ಕಮಿಷನರವರಿಗೆ ಈ ಅಧಿಕಾರ ಇರತಕ್ಕಂಥಾದ್ದು. In trust he has consulted you. ಆದ್ದರಿಂದ ತಾವು ದೇಶದ ಹಿತ ದೃಷ್ಟಿಯಿಂದ, ಪ್ರಜೆಗಳ ಹಿತದೃಷ್ಟಿಯಿಂದ ಯುಕ್ತವಾದ ಸಲಹೆಗಳನ್ನು ಕೊಡಬೇಕೇ ಹೊರತು ನಮ್ಮ ಪಾರ್ಟಿಯವರು ಗೆಲ್ಲುತ್ತಾರೆಯೋ ಇಲ್ಲವೋ, ಗೆಲ್ಲುವುದಕ್ಕೆ ಸಾಧ್ಯವಿಲ್ಲದೆ ಹೋದರೆ ಹೇಗೆ ಮಾಡುವುದು—ಹೀಗೆಲ್ಲ ಯೋಚನೆ ಮಾಡುತ್ತಾ .....

Sri H. K. VEERANNA GOWDA.—It is quite wrong for the Hon'ble Member to presume all this.

ಜನಾಬ್ ಜೆ. ಮಹಮದ್ ಇಮಾಂರವರು.—It is perfectly clear. ಹಾಗಿಲ್ಲದಿದ್ದರೆ ಇಲ್ಲಿ ಸಭೆಯ ಮುಂದಿಟ್ಟು ಬಿಟ್ಟು, ಕುಮಾರ ಪಾರ್ಕಿನಲ್ಲಿ ಪಾರ್ಟಿಯವರೆಲ್ಲರೂ ಸೇರಿ ಏನೇನೋ ಮಾತನಾಡಿಕೊಂಡು ಬಂದು ನಿಮ್ಮಿಷ್ಟದ ಪ್ರಕಾರ ಬದಲಾವಣೆ ಮಾಡಿಕೊಳ್ಳುವುದು ಇದೆಲ್ಲಾ ಆಗುತ್ತದೆಯೇ?

Sri K. CHENGALARAYA REDDY (Leader of the House).—Sir, I think the Hon'ble Member is making wide conjectures.

Janab J. MAHOMED IMAM.—Can they say that this matter was never placed before the party meeting?

Sri H. C. DASAPPA.—Why should we!

Sri K. CHENGALARAYA REDDY.—May I please know whether I have to oblige the Honourable Member by winding up our party ?

Janab J. MAHOMED IMAM.—I say that this is not a party matter or a Government matter or an administrative matter. This is a matter which purely demands the trust, to do justice to one and all. If you refer this to your party, it becomes a party matter and justice cannot be done to all.

Sri K. T. BHASHYAM.—Mr. Speaker, it is now 3-20 and I expect that you wind up this debate by the time we rise up for lunch. We are not interested in continuing this controversy. My suggestion is that you must close the debate at this stage and allow me to make a reply.

ಜನಾಬ್ ಜೆ. ಮಹಮದ್ ಇಮಾಂರವರು.—ಆದ್ದರಿಂದ ನಾನ ಹೇಳುವುದೇನೆಂದರೆ, ನೀವು ಹಿಂದೆ ಯಾವ tentative ಸೂಚನೆ ಕೊಟ್ಟಿದ್ದಿರೋ ಅದೇ ಪ್ರಕಾರ ಒಂದು ಸಮಿತಿಯನ್ನು ಮಾಡಿ ಅದಕ್ಕೆ ಯಾವ ರೀತಿ ಬೇಕಾದರೂ ಮುಂದುವರಿಯುವುದಕ್ಕೆ ಪೂರ್ಣಾವಕಾಶ ಕೊಡಿ. ಸಮಿತಿಯಲ್ಲಿ ಎಲ್ಲ ಪಕ್ಷದವರೂ, ಪ್ರಜೀಣರೂ ಇರುತ್ತಾರೆ. ಅಲ್ಲಿ ಎಲ್ಲವನ್ನೂ ಕೂಲಂಕಷವಾಗಿ ಚರ್ಚೆ ಮಾಡೋಣ. ಇನ್ನೂ ಚರ್ಚೆಮಾಡಿ ಯಾವುದನ್ನೂ ಹೇಳುವುದಕ್ಕೆ ಮೊದಲೇ ಅವರ ಕೈ ಕಾಲು ಕಟ್ಟುವುದು ಬೇಡ, ಎಂಬುದೇ ನನ್ನ ಸೂಚನೆ.

ಶ್ರೀ ಕೆ. ಟಿ. ಭಾಷ್ಯಂರವರು.—ಅಧ್ಯಕ್ಷರೇ, ಈ ವಿಷಯದ ಮೇಲೆ ಬಹಳವಾಗಿ ಚರ್ಚೆ ನಡೆದಿದೆ; ಸ್ವಲ್ಪ ತೀವ್ರವಾಗಿಯೂ ಸಹ ನಡೆಯುತ್ತೆನ್ನಬಹುದು. ಅವಕ್ಕೆ ಉತ್ತರವಾಗಿ ನಾನೇನೂ ಹೆಚ್ಚಾಗಿ ಹೇಳಬೇಕಾಗಿಲ್ಲವೆಂದು ನನ್ನ ಭಾವನೆ. ಆದರೂ, ಕೆಲವು ಮಹನೀಯರು ಮಾಡಿರುವ ಕೆಲವು ಆಕ್ಷೇಪಣೆಗಳಿಗೆ ಜವಾಬಾಗಿ ಒಂದೊಂದು ಮಾತು ಹೇಳಿ ಮುಂದೆ ಹೋಗುತ್ತೇನೆ.

ಶ್ರೀ ಸಿದ್ದಪ್ಪನವರು ಮಾಡಿದ ಆರೋಪಣೆಗಳಿಗೆ ನನ್ನ ಮಿತ್ರರಾದ ಶ್ರೀಗಳಾದ ಗೋವಿಂದರೆಡ್ಡಿಯವರು ಮತ್ತು ವೀರಣ್ಣಗೌಡರು ಸಮಜಾಯಿಷಿ ಹೇಳಿದ್ದಾರೆ. ಸಮಿತಿಯನ್ನು ಮಾಡಿದ್ದು ಈ ವಿಚಾರಗಳನ್ನೆಲ್ಲಾ ಚರ್ಚೆ ಮಾಡಬೇಕೆಂದೇ. ಆದರೂ ಅದರ ಕೆಲಸವನ್ನು ಸುಲಭವಾಗಿ ಮಾಡಲು ಅನುಕೂಲವಾಗಲೆಂದು ಈ ತಿದ್ದುಪಡಿಯನ್ನು ತಂದಿರುವುದಾಗಿದೆ. ಹೀಗಿರುವಾಗ ಈ ತಿದ್ದುಪಡಿಯನ್ನು ನಿನ್ನೆಯೇ ಏಕೆ ತರಲಿಲ್ಲ, ನಿನ್ನೆ ಹೊಳೆಯಲಿಲ್ಲವೇ, ಇವತ್ತು ಹೇಗೆ ಹೊಳೆಯಿತು, ಎಂದೆಲ್ಲಾ ಪ್ರಶ್ನಿಸಬೇಕಾದ ಅಗತ್ಯವಿಲ್ಲ. ಮುಖ್ಯವಾಗಿ ಅದರಿಂದ ಒಳ್ಳೆಯದಾಗುವುದಾಗಿದ್ದರೆ, ಯಾವುದನ್ನೇ ಆಗಲಿ ಇಟ್ಟುಕೊಳ್ಳಬೇಕು. ಸಮರ್ಪಕವಾಗಿದ್ದರೆ ಯಾವಾಗ ತಂದರೂ ತೆಗೆದುಕೊಳ್ಳುವುದು ಉಚಿತ. ಅದನ್ನು ತೆಗೆದುಕೊಳ್ಳುವುದು ಅಥವಾ ಬಿಡುವುದು ಅಧ್ಯಕ್ಷರಿಗೂ ಮತ್ತು ಸಭೆಯವರಿಗೂ ಬಿಟ್ಟಿದ್ದು. ಈಗ ಸಭೆಯವರು ಒಪ್ಪಿರುವಾಗ ಅದರಲ್ಲಿ ತಪ್ಪೇನೋ

ಗೊತ್ತಿಲ್ಲ. ಖಚಿತವಾಗಿ ಒಂದು ಮಾರ್ಗ ಹಾಕಿಕೊಟ್ಟರೆ ಇನ್ನೂ ಒಳ್ಳೆಯದಲ್ಲವೇ?

ಜನಾಬ್ ಜೆ. ಮಹಮದ್ ಇಮಾಂರವರು.—ಯಾವುದಾದರೂ ಇಲಾಖೆಯವರಿಗೆ ಹೇಳಿದ್ದರೂ ಅವರು ಈ ಕೆಲಸ ಮಾಡುತ್ತಿದ್ದರು!

ಶ್ರೀ ಕೆ. ಟಿ. ಭಾಷ್ಯಂರವರು.—ಹೀಗಿದ್ದರೆ ಸಮಿತಿಯನ್ನೇಕೆ ಮಾಡಿದಿರಿ ಎಂದು ಕೇಳಿದರು. ಇತರ ಕಡೆಗಳಲ್ಲಿ ಯಾವ ರೀತಿ ಮಾಡಿದ್ದಾರೆಂಬುದನ್ನು ತಿಳಿದುಕೊಂಡು ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಖಚಿತವಾದ ಅಭಿಪ್ರಾಯಗಳನ್ನು ಕೊಟ್ಟು ಸಮಿತಿಯವರು ಅವುಗಳ ಮೇಲೆ ಕೊಡತಕ್ಕಂಥ ಸಲಹೆಗಳಂತೆ ನಡೆಯುತ್ತೇವೆಂದು ಹೇಳುವುದರಲ್ಲಿ ತಪ್ಪೇನು?

ಶ್ರೀ ಎರ್. ಸಿದ್ದಪ್ಪನವರು.—ಅದರಂತೆ ನಡೆಯುತ್ತೇವೆಂದು ಜನರಿಗೆ ತೋರಿಸುವುದಕ್ಕೆ ಅಷ್ಟೆ!

ಶ್ರೀ ಕೆ. ಟಿ. ಭಾಷ್ಯಂರವರು.—ಖಚಿತವಾಗಿ ಯಾವ ಅಭಿಪ್ರಾಯಗಳನ್ನೂ ಕೊಡದೆ ಹೋದರೆ ಏನನ್ನೂ ಖಚಿತವಾಗಿ ನಮ್ಮ ಮುಂದಿಡಲಿಲ್ಲ ಎಂದು ಹೇಳುತ್ತೀರಿ. ಏನಾದರೂ ಖಚಿತವಾಗಿ ಅಭಿಪ್ರಾಯ ಕೊಟ್ಟರೆ ಏಕೆ ಕೊಟ್ಟಿರಿ ಎಂದು ಕೇಳುತ್ತೀರಿ. ಇಂಥ ವಾದವನ್ನೇ 'ವಿತ್ತಂಡವಾದ' ಎಂದು ಹೇಳುತ್ತಾರೆ. ಸಾಮಾನ್ಯ ಭಾಷೆಯಲ್ಲಿ 'ಚೆಂಡೀ ಕತೆ' ಎಂದು ಹೇಳಬಹುದು. ಒಂದು ಸಲ ಒಂದೇ ಮನೆತನದವರಂತೆ ವರ್ತಿಸಬೇಕೆಂದು ಹೇಳುತ್ತೀರಿ. ಇನ್ನೊಂದು ಸಲ ಪಾರ್ಟಿಗೆ ಸೇರಿದ್ದರೂ ಸರ್ಕಾರವೆಂದ ಮೇಲೆ ಎಲ್ಲರಿಗೂ ಸಮಾಂಜಸವಾಗಿರುವಂತೆ ನಡೆಯಬೇಕೆಂದು ಹೇಳುತ್ತೀರಿ. ನೀವು ಹೇಳಿದಂತೆ ಸಮಾಂಜಸವಾದ ರೀತಿಯಲ್ಲೇ ನಾವು ನಡೆದುಕೊಂಡಿದ್ದೇವೆನ್ನುವುದಕ್ಕೆ ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ನಾವು ಏಕಸದಸ್ಯ ಚುನಾವಣೆ ಕ್ಷೇತ್ರಗಳನ್ನಿಟ್ಟುಕೊಳ್ಳುವ ಬದಲು ಪ್ಲೂರಲ್ ಮೆಂಬರ್ ಕ್ಷೇತ್ರಗಳನ್ನಿಟ್ಟುಕೊಳ್ಳಬೇಕೆಂದು ನಿರ್ಧರ ಮಾಡಿದ್ದರೆ, ನಮ್ಮ ಪಾರ್ಟಿಯವರನ್ನು ಎಲ್ಲಾ ಸ್ಥಾನಗಳಿಗೂ ನಿಲ್ಲಿಸಿ 'ಇವರು ಒಕ್ಕಲಿಗರು, ನಿಮ್ಮ ಜಾತಿಯವರೆಲ್ಲಾ ಓಟುಮಾಡಬೇಕೆನ್ನುವುದು, ಲಿಂಗಾಯತ್ ಜಾತಿಯವರಿಗೆ ಲಿಂಗಾಯಿತರನ್ನೆಲ್ಲಾ ಓಟು ಮಾಡಿರಿ ಎನ್ನುವುದು—ಹೀಗೆಲ್ಲಾ ಮಾಡಿ ಎಲ್ಲಾ ಸ್ಥಾನಗಳನ್ನೂ ಸುಲಭವಾಗಿ ಗಳಿಸಬಹುದಾಗಿತ್ತು. ಸಿಂಗಲ್ ಮೆಂಬರ್ ಚುನಾವಣಾ ಕ್ಷೇತ್ರವಿದ್ದರೆ ಹಾಗಾಗುವುದಿಲ್ಲ. ಇದರಲ್ಲಿ we have got the risk of facing some opposition from such of the parties which have put forward their candidates because we have put another. But we say, that is in the interest of the country.

ಆಮೇಲೆ, ಸಿಂಗಲ್ ಮೆಂಬರ್ ಕ್ಷೇತ್ರಗಳಿದ್ದರೆ ಕಮ್ಯೂನಲಿಸಂ ಪ್ರಾಬಲ್ಯಕ್ಕೆ ಬರುವುದಕ್ಕೆ ಅವಕಾಶವಾಗುತ್ತದೆಂದು ಕೆಲವರು ಹೇಳಿದ್ದಾರೆ. ಆ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಹೆಚ್ಚಾಗುವುದಕ್ಕೆ ಬದಲಾಗಿ ಕಮ್ಯೂನಲಿಸಂ ಕಡಿಮೆಯಾಗುತ್ತದೆ. ಇನ್ನೂ ಪ್ಲೂರಲ್ ಮೆಂಬರ್ ಕ್ಷೇತ್ರಗಳಿದ್ದರೇನೇ ಕಮ್ಯೂನಲಿಸಂ ಜಾಸ್ತಿಯಾಗುವುದು. ಸಿಂಗಲ್ ಮೆಂಬರ್ ಕ್ಷೇತ್ರಗಳಲ್ಲಿ ಓಟು ಮಾಡುವವರು ಜಾತಿ, ಮತದ ದೃಷ್ಟಿಯ ಮೇರೆ ಓಟು ಮಾಡುವುದಕ್ಕಾಗುವುದಿಲ್ಲ. ಒಬ್ಬನೇ ಒಬ್ಬ ಉಮೇದುವಾರನಾಗಿರುತ್ತಾನೆ. ಆದ್ದರಿಂದ ಬೇರೆ ಮತದವರೂ ಓಟು ಮಾಡಬೇಕಾಗಿರುತ್ತದೆ. ಹೀಗೆ ಬೇರೆಯವರೂ ತನಗೆ ಓಟು ಕೊಟ್ಟಿದ್ದರಿಂದ ಅವರಿಗೂ ತಾನು ಸೇವೆ ಮಾಡಬೇಕೆಂಬ ಮನೋಭಾವನೆ ಅತನಲ್ಲಿಯೂ ಬಂದೇ ಬರುತ್ತದೆ. ಒಂದು ವಿಧದಲ್ಲಿ ಅತನು ಅವರ ಕಷ್ಟ ಸುಖಗಳಿಗೆ ಜವಾಬ್ದಾರನಾಗಿರುತ್ತಾನೆಂದು ತಿಳಿಯಬೇಕು. ಕಾಲಕ್ರಮೇಣ ಜಾತಿ ಮತ ಭಾವನೆಗಳು ಹೋಗುವುದಕ್ಕೂ ಇದು ಸಹಾಯಕವಾಗಿದೆ.

ಮೈನಾರಿಟಿಗಳ ಪ್ರಶ್ನೆ ಬಂತು. ಸಿಂಗಲ್ ಮೆಂಬರ್ ಕ್ಷೇತ್ರಗಳಿರುವುದರಿಂದ ಅಲ್ಪ ಸಂಖ್ಯಾತರಿಗೆ ಕಷ್ಟವಾಗುತ್ತದೆಂದು ವಾದ ಬಂತು. ಆದರೆ, ಅಲ್ಪಸಂಖ್ಯಾತರ ವಿಷಯದಲ್ಲಿ ನಾವು ಒಂದು ತಿಳಿಯಬೇಕು.

Minorities must, as Sri Narayana Rao said, live on the good-will and confidence of the majorities. We must develop that kind of tendency in the country. We should not allow the communal instincts to develop among the people. From that point of view, single-member constituency is very good.

ಇನ್ನೊಂದು ವಿಷಯ, ಈಗ ನಮ್ಮ ಸಂಸ್ಥಾನದಲ್ಲಿ ಸಾಮಾನ್ಯವಾಗಿ 40 ಲಕ್ಷ ಓಟರುಗಳಿದ್ದಾರೆಂದು ತಿಳಿಯಬಹುದು. ಅವರನ್ನು ಓಟು ಮಾಡಿಸಬೇಕಾದರೆ ಕೇಂದ್ರಗಳನ್ನು ದೊಡ್ಡದು ಮಾಡಿದರೆ ಹೇಗೆ? ಚಿಕ್ಕ ಕ್ಷೇತ್ರವಿದ್ದರೆ ಹೇಗೆ ಸುಲಭವಾಗುತ್ತದೆಂದು ಕೇಳಿಬಹುದು. ಸಾಮಾನ್ಯವಾಗಿ ಬಣ್ಣದ ಪೆಟ್ಟಿಗೆಗಳ ಪದ್ಧತಿಯನ್ನೇ ಇಟ್ಟುಕೊಳ್ಳಬೇಕಾಗುತ್ತದೆ. ಈ ಪದ್ಧತಿಯನ್ನಿಟ್ಟುಕೊಂಡು ಪ್ಲೂರಲ್ ಮೆಂಬರ್ ಕ್ಷೇತ್ರವನ್ನಿಟ್ಟುಕೊಂಡರೆ ಸಾಧಾರಣವಾಗಿ 20 ಬಣ್ಣದ ಪೆಟ್ಟಿಗೆಗಳಿಗೆ ಏರ್ಪಾಡು ಮಾಡಬೇಕಾಗುತ್ತದೆ. ನಾನಾ ವಿಶ್ರ ಬಣ್ಣಗಳಿರಬೇಕಾಗುತ್ತದೆ. ಸಹಜವಾಗಿಯೇ ಒಂದು ಬಣ್ಣಕ್ಕೂ ಇನ್ನೊಂದಕ್ಕೂ ವ್ಯತ್ಯಾಸ ಮಾಡುವುದೂ ಕೆಲವು ವೇಳೆ ಕಷ್ಟವಾಗಬಹುದು.

There is likelihood of confusion. Whereas if you have single-member constituency, there may be 4 or 5 colours; and dark colours like green, red, yellow and so on may be used. If dark and deep colours are used nobody can mistake. From that point of view, namely, that you have got to provide for coloured box system as the simplest and the easiest, safest and the least difficult. You came to the logical conclusion that you must restrict the number of colours you have to use and accept single-member constituency as the very best.

ಇನ್ನು ಕೆಲವರು, ಸಿಂಗಲ್ ಮೆಂಬರ್ ಕ್ಷೇತ್ರಗಳಿದ್ದರೆ ಲಂಚ ರುಷುವತ್ತುಗಳಿಗೆ ಅವಕಾಶವಾಗುತ್ತದೆಂದು ಹೇಳಿದರು. ಅದು ವಾಸ್ತವವಲ್ಲ.

There is no chance of any corruption in a single-member constituency because there will be Thirty-six thousand voters. No candidate, however rich he may be, can purchase the votes so as to overcome a rival.

ಹಾಗೆ ನೋಡಿದರೆ ಪ್ಲೂರಲ್ ಮೆಂಬರ್ ಕ್ಷೇತ್ರಗಳಲ್ಲೇ ಲಂಚರುಷುವತ್ತುಗಳು ಇರಬಹುದು. ಲಂಚ

ಕೊಡಬೇಕೆಂದರೆ ಯಾವ ತರಹ ಕ್ಷೇತ್ರ ಇದ್ದರೇನು? ಅದರಲ್ಲೂ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯಲ್ಲಾದರೋ ಕ್ಷೇತ್ರವು ಚಿಕ್ಕದಾಗಿರುವುದರಿಂದ ಬೇಗ ಎಲ್ಲರಿಗೂ ಗೊತ್ತಾಗಿಬಿಡುತ್ತದೆ. ಆದ್ದರಿಂದ ಆ ಆಕ್ಷೇಪಣೆ ಸರಿಯಲ್ಲ.

ಷೆಡ್ಯೂಲ್ ಪಂಗಡದ ಜನರು ಎಲ್ಲಾ ಕಡೆಯವರೂ ತಮ್ಮ ಪಂಗಡದವರೊಬ್ಬರಿಗೆ ಓಟು ಮಾಡುವುದಕ್ಕೆ ಅವಕಾಶವಿರಬೇಕು. ಸಿಂಗಲ್ ಮೆಂಬರ್ ಕ್ಷೇತ್ರಗಳಿದ್ದರೆ ಎಲ್ಲರಿಗೂ ಓಟು ಮಾಡಲು ಆಗುವುದಿಲ್ಲ; ಈ ದೃಷ್ಟಿಯಿಂದ ಪ್ಲೂರಲ್ ಮೆಂಬರ್ ಕ್ಷೇತ್ರಗಳಿದ್ದರೆ ಅನುಕೂಲ ಎಂದು ಹೇಳಿದರು. ಆದರೆ ಇದರಿಂದ ಆ ಷೆಡ್ಯೂಲ್ ಪಂಗಡದವರಿಂದ ಚುನಾಯಿತರಾಗಿ ಬಂದವನು ತಾನು ಕೇವಲ ಷೆಡ್ಯೂಲ್ ಪಂಗಡದವರನ್ನೇ ಪ್ರತಿನಿಧಿಸುತ್ತಾನೆಂಬ ಭಾವನೆ ಹೊಂದುತ್ತಾನೆ. ಅಂಥಾ ಭಾವನೆ ಬೆಳೆಯುವುದಕ್ಕೆ ಅವಕಾಶ ಕೊಡುವುದು ಸರಿಯಲ್ಲ. That is one reason why we cannot adopt this. Another reason is, if you make 19 constituencies for the whole State in order to provide for every Scheduled Class voter to vote for a Depressed Class candidate, what happens would be, this Scheduled Class candidate will have to traverse through large area and it would be very expensive. ಸಿಂಗಲ್ ಮೆಂಬರ್ ಕ್ಷೇತ್ರಗಳಿದ್ದರೆ ಉಮೇದುವಾರರಿಗೆ ಬಹಳ ಖರ್ಚಾಗುತ್ತದೆ, ಪ್ಲೂರಲ್ ಮೆಂಬರ್ ಕ್ಷೇತ್ರಗಳಿದ್ದರೆ 5-6 ಜನ ಉಮೇದುವಾರರೂ ಸೇರಿ ಭಾಗ ಮಾಡಿಕೊಳ್ಳಬಹುದು ಎಂದು ಹೇಳಿದರು. ತತ್ವದ ಮೇಲೆ ಏನೋ ಇದು ಸರಿಯಾಗಿ ಕಾಣಬಹುದು. ಆದರೆ ಇದನ್ನು ದೀರ್ಘವಾಗಿ ಪರಿಶೀಲಿಸಿ ನೋಡಿದರೆ ನಿಜಾಂಶ ಗೊತ್ತಾಗುತ್ತದೆ. No member will trust another to canvass for him. ಆದ್ದರಿಂದ ಪ್ರತಿಯೊಬ್ಬನೂ ಹೋಗಿಯೇ ಹೋಗಬೇಕಾಗುತ್ತದೆ. ಆದ್ದರಿಂದ ಪ್ಲೂರಲ್ ಮೆಂಬರ್ ಕ್ಷೇತ್ರಗಳಿದ್ದು ಅಷ್ಟೊಂದು ಪ್ರದೇಶವನ್ನೂ ಆತನು ಸುತ್ತಬೇಕೆಂದರೆ ಎಷ್ಟು ಖರ್ಚಾಗುತ್ತದೆಂಬುದನ್ನು ನೋಡಬೇಕು. ಅಲ್ಲದೆ ಸರ್ಕಾರದವರಿಗೂ ಪೋಲಿಂಗ್ ನಡೆಸುವುದಕ್ಕೆ ಓಟಿಂಗ್ ಪೇಪರ್‌ಗಳನ್ನು ಬಹಳವಾಗಿ ಮುದ್ರಿಸಬೇಕಾಗುತ್ತದೆ. ಇದರಿಂದ ಬಹಳ ನಷ್ಟಕ್ಕೆ ಅವಕಾಶವಿದೆ.

Whereas, if it is a small area, voters' list of that area may be printed and circulated within that area. So the expenses will be less both for the candidate and for the Government in single-member constituency. Of course there are some defects. There may be some difficulty for a woman being put as a candidate in single-member Constituency. We are building healthy party system in the country. We can put a woman as a candidate and say, in the interest of the party we ask you to vote for the lady. If the party commands the confidence of the people, naturally, the lady returns as against anybody who stands there. It is also good to build up political parties in the interest of the country. That is another way to overcome communalism in the country. ಈಗ ನಾವು ಪ್ಲೂರಲ್ ಮೆಂಬರ್ ಕ್ಷೇತ್ರಗಳೆಂದು ಎರಡೆರಡು ಮೆಂಬರುಗಳು ಬರುವುದಕ್ಕೆ ಅವಕಾಶ ಮಾಡಿರುವಂತೆ, ಷೆಡ್ಯೂಲ್ ಪಂಗಡದವರನ್ನೂ ಕೆಲವು ಕಡೆಗಳಲ್ಲಿ ನಿಲ್ಲಿಸಿ ಎಲ್ಲಾ ಷೆಡ್ಯೂಲ್ ಪಂಗಡದವರಿಗೂ ತಮ್ಮ ಪಂಗಡದವನಿಗೆ ಓಟು ಮಾಡುವಂತೆ ಅವಕಾಶ ಮಾಡಿಕೊಡಿ ಎಂದು ಹೇಳಿದರು.

ಶ್ರೀ ಎಲ್. ಸಿದ್ಧಪ್ಪನವರು.—ಈಗ ನಿಮ್ಮ ಅಭಿಪ್ರಾಯದಲ್ಲಿ 19 ಮಾತ್ರ ಪ್ಲೂರಲ್ ಮೆಂಬರ್ ಕ್ಷೇತ್ರಗಳಿರಬೇಕೆಂದು ತೋರುತ್ತದೆ. ಅವರು ಹೇಳುವುದು, ಇದನ್ನು 19ಕ್ಕೆ restrict ಮಾಡಬೇಡಿ ಎಂದು.

Sri K. T. BHASHYAM.—What we are thinking about is the adoption of single-member constituency as far as possible. But the Scheduled Classes cannot have single-member constituency because they have got the reservation of seats, and therefore we are bound to have plural-member constituency. Even those constituencies which seemingly are plural-member constituencies, are really single-member constituencies because every voter can vote only for one general candidate and one of the Scheduled Class. Even those constituencies which may seem to be plural-member constituencies are in fact single-member Constituencies.

ಶ್ರೀ ಮಾದಯ್ಯನವರು ಹೇಳಿದ್ದು ಒಟ್ಟು 99 ಕ್ಷೇತ್ರಗಳನ್ನು ಮಾಡುವುದರಲ್ಲಿ 19ನ್ನು ಷೆಡ್ಯೂಲ್ಡ್ ಪಂಗಡದವರಿಗೆ ಮೀಸಲಾಗಿಡಿ ಎಂದು. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಏಕೆಂದರೆ Representation of the People Act, 9 ನೆಯ ಸೆಕ್ಷನ್‌ನಲ್ಲಿ ಹೀಗೆ ಹೇಳಿದೆ:

"As soon as may be after the commencement of this Act, the President shall, by order, determine—

x x x x

x x x x

(d) the number of seats, if any, reserved for the scheduled castes or for the scheduled tribes in each constituency.—

You can only reserve out of the whole; you cannot appropriate everything. So it shows that the least that could be expected in a constituency where there is a reserved seat for scheduled castes, is two and that is the minimum. All told, I submit that we have done our very best to provide for the simplest method of election, enabling the people to vote for the best candidate in the country and enabling service and

popularity to be the sole test of success in an election. From all these points of view, the suggestions embodied in the amendment suggested by Sri D. H. Chandrasekharaiya are welcome. Probably, as the mover of this motion it is for me to say whether I accept that amendment and if I do not accept that motion, then it will have to be put to the vote of the House. Am I right, Mr. Speaker?

Mr. SPEAKER.—Yes.

Sri K. T. BHASHYAM.—Then, I may say that I accept the amendment of Sri Chandrasekharaiya. The amended resolution...

Mr. SPEAKER.—There is no resolution of the Hon'ble Minister.

Sri K. T. BHASHYAM.—It is a motion and this is an amendment to that motion. Therefore, I am free either to accept it straightaway or...

Mr. SPEAKER.—Whether it is accepted or not, the amendment will have to be put to the vote of the House.

Sri K. T. BHASHYAM.—Then, of course, I will abide by the decision of the House. I may express my view that this amendment is very welcome to me, as also the amendment moved by Sri G. Veerappa and further I accept the suggestions made by certain other members yesterday that some more members be included in the Committee.

Mr. SPEAKER.—Is the Honourable Member Janab Mahomed Imam going to press his amendment?

Janab J. MAHOMED IMAM.—I am true to that principle. I cannot change my opinion. Is my suggestion to accept additional names accepted?

Sri K. T. BHASHYAM.—I not merely agree to the suggestion but I welcome it.

ಅಧ್ಯಕ್ಷರು.—ಶ್ರೀ ಜಿ. ವೀರಪ್ಪನವರು ಕಳುಹಿಸಿದ್ದ ತಿದ್ದುಪಡಿಯಲ್ಲಿ ನಮೂದಿಸಿರುವ ಮೆಂಬರುಗಳ ಜೊತೆಗೆ ಈ ಕೆಳಕಂಡ ಮೆಂಬರುಗಳನ್ನು ಸಹ ಹೆಚ್ಚಿಗೆ ಸೇರಿಸ ಬೇಕೆಂಬುದಾಗಿ ಕೆಲವು ಮಾನ್ಯ ಸದಸ್ಯರುಗಳಿಂದ ಸೂಚನೆಗಳು ಬಂದು ಈ ಸಭೆಯವರು ಅದಕ್ಕೆ ಅನುಮತಿ ಕೊಟ್ಟಿದ್ದಾರೆ. ಅದರ ಪ್ರಕಾರ—ಶ್ರೀಗಳಾದ ಎಚ್. ಬಿ. ಗುಂಡಪ್ಪಗೌಡರು, ಎಲ್. ಸಿದ್ದಪ್ಪನವರು, ಎಚ್. ಸಿದ್ದವೀರಪ್ಪನವರು, ಎಸ್. ರಂಗರಾಮಯ್ಯನವರು, ಟಿ. ಹನುಮಯ್ಯನವರು, ಡಬ್ಲ್ಯು. ಎಚ್. ಹನುಮಂತಪ್ಪನವರು, ಮತ್ತು ಜನಾಬ್ ಸ್ಯೆಯದ್ ಅಬ್ದುರ್ ರಹಿಮಾನ್‌ರು—ಇವರುಗಳನ್ನು ಹೆಚ್ಚಿಗೆ ಸೇರಿಸಲಾಗುವುದು.

Janab MOHAMED HANEEF.—I propose that Janab Syed Abdur Rahman's name also may be included?

(*Voices*: Yes.)

Janab J. MAHOMED IMAM.—I beg leave of the House to withdraw my amendment.

The amendment was, by leave of the Assembly, withdrawn.

Janab SYED ABDUR RAHMAN.—Sir, I wish to withdraw my amendment.

The amendment was, by leave of the Assembly, withdrawn.

Mr. SPEAKER.—The question is:

"Add the following at the end of the motion":—

'and a committee consisting of the following members be formed to work out the details of delimitation and to advise the Government in this behalf within one month from now.':

"The Law Minister (Chairman), Sri G. Narayana Gowda, Sri B. C. Nanjundiah, Sri K. Subba Rao, Sri H. K. Veeranna Gowda, Sri H. M. Channabasappa, Sri M. Hutche Gowda, Sri B. N. Boranna Gowda, Sri M. Madiah, Janab J. Mohamed Imam, Sri K. R. Madhava Rao, Sri G. Veerappa, Sri H. B. Gundappa, Gowda, Sri L. Siddappa, Sri H. Sidda Veerappa, Sri S. Rangaramiah, Sri T. Hanumiah, Sri W. H. Hanumanthappa, Janab Syed Abdur Rahman, with the Law Secretary as Secretary of the Committee."

The motion was adopted.

Mr. SPEAKER.—Sri Chandrasekharaiya's amendment. The question is:—

"That for the words from 'This House' till the end of the Motion, the following words be substituted.

"That this Assembly is of opinion that the following be taken as the recommendation of this House in regard to the delimitation of Constituencies of and the conduct of elections to (*a*) the Legislative Assembly of the State (*b*) the House of the People.

"I. All territorial Constituencies should be single-member constituencies except where the scheduled castes are to be provided for.

"II. Scheduled castes should be provided for in plural-member constituencies of two seats each—one general and one reserved for scheduled.

"III. The method of voting should be distributive vote.

"IV. The coloured box system should be adopted.

The motion was adopted.

Mr. SPEAKER.—The question is—

"That the Special Motion re. Delimitation of Constituencies, as amended, * be passed."

The motion was adopted.

Mr. SPEAKER—The House will now rise for Lunch and meet again at 4-10 p.m.

The Assembly adjourned for Lunch at Forty Minutes past Three of the Clock and reassembled at Ten Minutes past Four of the Clock, Mr. Speaker (Sri V. Venkatappa) in the Chair.

STATEMENT LAID ON THE TABLE.

Recommendations of the House Committee.

Sri L. H. THIMMA BOI (Chairman of the House Committee).—Sir, I beg to lay on the Table the * recommendations of the House Committee for the Legislative Assembly adopted at its meetings held on 6th and 24th March 1950 and the action taken thereon.

Resolutions passed by the Library Committee.

Sri S. R. GURU (Member of the Library Committee).—Sir, at the request of the Chairman of the Library Committee, I beg to lay on the Table the * resolutions passed by the Library Committee of the Legislative Assembly at its meeting held on 1st August 1950 and the action taken thereon.

LEGISLATIVE BUSINESS

Bangalore Survey Bill, 1950.

Motion to withdraw.

Sri R. CHENNIGARAMIAH (Minister for Local Self-Government).—Sir, I beg to move for leave of this House to withdraw the Bangalore Survey Bill, as recommended by the Select Committee.

ಹಿಂದಿನ ಅಧಿವೇಶನದಲ್ಲಿ ಸರ್ವೆ ಬಿಲ್ಲನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸಲಾಗಿತ್ತು. ಅವರು ಅದರ ಪ್ರತಿಯೊಂದು ಅಂಶವನ್ನೂ ಕೂಲಂಕಷವಾಗಿ ಪರಿಶೀಲಿಸಿ ಕೆಲವು ನ್ಯೂನತೆಗಳನ್ನು ಕಂಡುಹಿಡಿದರು. ಸರ್ಕಾರದ ವರು ಯಾವ ಉದ್ದೇಶದಿಂದ ಈ ಬಿಲ್ಲನ್ನು ತಂದಿದ್ದಾರೋ ಆ ಉದ್ದೇಶವು ಇದರ ಪ್ರಕಾರ ನೆರವೇರುವುದಿಲ್ಲ. ಆದ್ದರಿಂದ ಕೆಲವು ಬದಲಾವಣೆಗಳಿಂದ ಬೇರೆ ರೂಪವಾಗಿ ಬಿಲ್ಲನ್ನು ತರಬೇಕು. ಈಗಿರುವ ರೀತಿಯಲ್ಲಿ ಬಿಲ್ಲನ್ನು ತರುವುದು ಅಷ್ಟು ಸೂಕ್ತವಲ್ಲ. ಇದನ್ನು ವಾಪಸು ತೆಗೆದುಕೊಂಡರೆ ಅನುಕೂಲ ಎಂದು ಸಮಿತಿಯವರು ಅಭಿಪ್ರಾಯಪಟ್ಟರು. ಅದೇ ರೀತಿ ಅವರು ಶಿಫಾರ್ಸು ಮಾಡಿದ್ದಾರೆ. ನಾನೂ ಆ ಸಮಿತಿಯಲ್ಲಿದ್ದು ಅಭಿಪ್ರಾಯಗಳನ್ನೆಲ್ಲಾ ಪರಿಶೀಲಿಸಿದ್ದೇನೆ. ಮದ್ರಾಸಿನಲ್ಲಿರುವ ಸರ್ವೆ ಬಿಲ್ಲು ಸೂಕ್ತವಾಗಿದೆ. ಅದು ನಮ್ಮ ದೇಶಕ್ಕನುಗುಣವಾಗಿದೆ. ಅದರಿಂದ ಹೆಚ್ಚಿನ ಸಹಾಯವಾಗುತ್ತದೆಂದು ಗೊತ್ತಾಗಿದೆ. ಮೊನ್ನೆ ಮದ್ರಾಸಿಗೆ ಹೋಗಿದ್ದಾಗ ನಾನು ಅಲ್ಲಿನ ಬಿಲ್ಲನ್ನು ಓದಿನೋಡಲಾಗಿ ಅದು ಚೆನ್ನಾಗಿದೆಯೆಂಬ ಅಭಿಪ್ರಾಯ ಬಂತು. ಆ ಕಾರಣದಿಂದ ಸೆಲೆಕ್ಟ್ ಸಮಿತಿಯ ಶಿಫಾರ್ಸಿನ ಪ್ರಕಾರ ಈ ಸರ್ವೆ ಬಿಲ್ಲನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

Mr. SPEAKER.—Motion moved.—

"That leave be granted to withdraw the Bangalore Survey Bill, 1950, as recommended by the Select Committee."

(After a pause.)

Mr. SPEAKER.—The question is.—

"That leave be granted to withdraw the Bangalore Survey Bill, 1950, as recommended by the Select Committee".

The motion was adopted.

Report of the Committee of Privileges.

Sri A. BHEEMAPPA NAIK (Chitaldrug District—General).—Sir, I beg to move:

"That this House do approve of the recommendations made in the report of the Committee of Privileges presented to the House on 30th August 1950".

I have been asked by the Chairman of the Committee to make this motion on his behalf.

The Conference of Speakers held in 1949 decided that the State Legislatures should be asked to undertake a survey of the privileges of the State Legislatures, its members and committees. The Committee has examined in detail this question and has forwarded a note to the Speaker's Conference which was held recently. Any further action to be

---

*Copies placed in the Assembly Library.